ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ

ಲೆಕ್ಕ ಪರಿಶೋಧನಾ ವರದಿ
ಸನ್ 2018-19

ಕರ್ನಾಟಕ ಸರ್ಕಾರ

ರಾಜ್ಯ ಲೆಕ್ಕ ಪತ್ರ ಇಲಾಖೆ

ಸಂ: ಜ.ಸ್ಥ.ಲೆ.ಪ.ವ.ಧಾ/ಆಡಿಟ್ ವರದಿ/2019-20/527

ಜಂಟಿ ನಿರ್ದೇಶಕರ ಕಚೇರಿ,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಮಿನಿ ವಿಧಾನಸೌಧ, ಧಾರವಾಡ
ದಿ : 21/11/2019.

ಇವರಿಗೆ,
ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,
ನವನಗರ, ಹುಬ್ಬಳ್ಳಿ.

ಮಾನ್ಯರೇ,

ವಿಷಯ : ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಸನ್ 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಬಗ್ಗೆ.

ಉಲ್ಲೇಖ: ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ರ ನಿಯಮ 48 ರನ್ವಯ.

* * * * * * * *

ಮೇಲಿನ ವಿಷಯದಲ್ಲಿಯಂತೆ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ದಿ. 17-10-2019ರಂದು ಮಾನ್ಯ ಅಪರ ನಿರ್ದೇಶಕರು, ಪ್ರಾಂತೀಯ ಕಚೇರಿ, ಬೆಳಗಾವಿ ಇವರು ಪುನರ್ ಪರಿಶೀಲನೆ ಮಾಡಿದ್ದು, ಲೆಕ್ಕ ತಪಾಸಣಾ ವರದಿಯನ್ನು ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲಾಗಿದೆ.

(ಸದರಿ ವರದಿಯು ಮಾನ್ಯ ಅಪರ ನಿರ್ದೇಶಕರು,
ಬೆಳಗಾವಿ ಇವರಿಂದ ಅನುಮೋದಿತ)

ತಮ್ಮ ವಿಶ್ವಾಸಿ

ಸಹಿ/-
ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಧಾರವಾಡ

ಅಡಕ : ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವರದಿ

ಪ್ರತಿಯನ್ನು:

1. ಮಾನ್ಯ ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, 'ಎ' ಬ್ಲಾಕ್, ಬಿ.ಎಮ್.ಟಿ.ಸಿ.ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು. ಇವರಿಗೆ ಗೌರವಪೂರ್ವಕವಾಗಿ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಸಲ್ಲಿಸಲಾಗಿದೆ.

2. ಮಾನ್ಯ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

ಸಹಿ/-
ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಧಾರವಾಡ

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಸನ್ 2018-19ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳ ವಿವರ.

ಕ್ರ. ಸಂ.	ಭಾಗ ಸಂಖ್ಯೆ	ಕಂಡಿಕೆ ಸಂಖ್ಯೆ	ನ್ಯೂನ್ಯತೆಗಳ ವಿವರ
1	2	2	ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಆಕ್ಷೇಪಣೆ / ವಸೂಲಾತಿಗಳ ತೀರುವಳಿಗೆ ಕ್ರಮ ಕೈಗೊಳ್ಳದಿರುವುದು
2	2	13	ಆಸ್ತಿ ಕರ ಬೇಡಿಕೆ ಮತ್ತು ವಸೂಲಾತಿಯ ಡಿ.ಸಿ,ಬಿ. ರಜಿಸ್ಟರ್ ನಿರ್ವಹಿಸದೇ ಇರುವುದು.
3	2	14	ಮೇಲ್ವಿಚಾರಣೆ ಶುಲ್ಕ ಮತ್ತು ಉತ್ತಮತೆ ಶುಲ್ಕ ವಸೂಲಿಯಲ್ಲಿ ಕಾಯದೆಯನುಸಾರ ಕ್ರಮ ಜರುಗಸದೇ ಇರುವುದರಿಂದ ಆರ್ಥಿಕ ಹಾನಿ ಉಂಟಾಗಿರುವುದು.
4	2	25	ಸರ್ಕಾರದಿಂದ ಮಂಜೂರಾದ ಹುದ್ದೆಗಿಂತ ಹೆಚ್ಚುವರಿ ಸಿಬ್ಬಂದಿಯನ್ನು ಆರ್ಥಿಕ ಇಲಾಖೆಯ ಪೂರ್ವಾನುಮತಿ ಇಲ್ಲದೇ ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ನಿಯಮ ಬಾಹಿರವಾಗಿ ನೇಮಕಾತಿ ಮಾಡಿಕೊಂಡಿರುವ ಕುರಿತು.
5	2	27	ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ತುಂಡು ಗುತ್ತಿಗೆ ಮೂಲಕ ಕಾಮಗಾರಿ ನಿರ್ವಹಿಸಿದ ಕುರಿತು.
6	2	30	ಚರಾಸ್ಥಿ ಮತ್ತು ಸ್ಥಿರಾಸ್ಥಿ ವಹಿ ನಿರ್ವಹಿಸುವುದು
7	2	31	ಸೂಟ ರಿಜಿಸ್ಟರ ಕುರಿತು

ಸಹಿ/-
ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಧಾರವಾಡ

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2018–19 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆಯಲ್ಲಿಟ್ಟ ಹಾಗೂ ವಸೂಲಾತಿಗೆ ಸೂಚಿಸಿದ ಮೊಬಲಗಿನ ವಿವರಣಾ ಪಟ್ಟಿ.

ಅ.ನಂ.	ಭಾಗ ಸಂಖ್ಯೆ	ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆ ಮೊತ್ತ ರೂ.	ವಸೂಲಾತಿ
1	2	10(ಕ)	ಮುದ್ದತ ಠೇವಣಿಗಳ ಟಿ.ಡಿ.ಎಸ್. ಕಡಿತಗೊಳಿಸಿರುವ ಕುರಿತು	29,57,742–00	
2	2	13	ಉಪಕರಣಗಳನ್ನು ಸರ್ಕಾರಕ್ಕೆ ಭರಣ ಮಾಡದಿರುವುದು	54,549–00	
3	2	14	ಮೇಲ್ವಿಚಾರಣೆ ಶುಲ್ಕ ಮತ್ತು ಬೆಟರಮೆಂಟ್ ಲೆವಿ ಭರಿಸಿ ಕೊಳ್ಳುವ ಕುರಿತು	3,76,40,163–00	
4	2	16(ಕ)	ಮೂಲೆ ನಿವೇಶನದ ಬಾಕಿ ಮೊತ್ತವನ್ನು ವಿಳಂಬವಾಗಿ ಭರಿಸಿ ಕೊಂಡು ದಂಡ ವಿಧಿಸಿರುವುದು		37,263–00
5	2	19	ನಾಗರೀಕ ಸೌಲಭ್ಯ ನಿವೇಶನಗಳ ನೊಂದಣಿಯಲ್ಲಿ ಕಡಿಮೆ ಭರಣ ಮಾಡಿಕೊಂಡಿರುವುದು		21,000–00
6	2	20	ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಮೊತ್ತವನ್ನು ವಿಳಂಬವಾಗಿ ಧರಿಸಿದ ಮೊತ್ತದ ದಂಡ		5,16,120–00
7	2	25	ಆರ್ಥಿಕ ಇಲಾಖೆಯ ಅನುಮತಿ ಇಲ್ಲದೇ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡಿಕೊಂಡಿರುವುದು	81,04,335–00	
8	2	26	ಕೆ.ಟಿ.ಪಿ.ಪಿ. ನಿಯಮ 4 (ಇ) ಉಲ್ಲಂಘನೆಯಾಗಿರುವುದು	4,07,646–00	
9	2	27(ಅ)	ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ತುಂಡು ಗುತ್ತಿಗೆ ಮೂಲಕ ಕಾಮಗಾರಿ ನಿರ್ವಹಿಸಿರುವುದು	4,59,630–00	
10	2	27(ಬ)	ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿ ತುಂಡು ಗುತ್ತಿಗೆ ಮೂಲಕ ಕಾಮಗಾರಿ ನಿರ್ವಹಿಸಿರುವುದು	19,61,222–00	
11	2	28	ಕಾಮಗಾರಿ ವಿಳಂಬಕ್ಕೆ ದಂಡ ವಸೂಲಾತಿ ಮಾಡಿಕೊಳ್ಳದಿರುವುದು		9,14,804–00
12	2	33	ಲೆಕ್ಕ ಪರಿಶೋಧನ ಶುಲ್ಕ ಭರಣಾ ಮಾಡುವ ಕುರಿತು	5,10,857–00	
			ಒಟ್ಟು	**5,20,96,144–00**	**14,89,187–00**

ಸಹಿ/–
ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವಲಯ,
ಧಾರವಾಡ.

ಭಾಗ – 1

1) ಸಾಮಾನ್ಯ ಪರಿಚಯ :

1	ಸಂಸ್ಥೆಯ ಹೆಸರು	ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾದಿಕಾರ, ಹುಬ್ಬಳ್ಳಿ
2	ಲೆಕ್ಕ ಪರಿಶೋಧನಾ ಅವಧಿ	2018–19
3	ಲೆಕ್ಕಪರಿಶೋಧನೆ ಪ್ರಾರಂಭ	28–08–2019
4	ಲೆಕ್ಕ ಪರಿಶೋಧನೆ ಮುಕ್ತಾಯ	21–09–2019
5	ಉಪಯೋಗಿಸಿದ ಮಾನವ ದಿನಗಳು	75 ಮಾನವ ದಿನಗಳು
6	ಲೆಕ್ಕ ಪರಿಶೋಧನೆ ಮಾಡಿದವರು	ಶ್ರೀ ಎನ್. ಜಿ. ಸರಾಫ್, ಲೆಕ್ಕಪರಿಶೋಧನಾಧಿಕಾರಿಗಳು, ಶ್ರೀ ಡಿ. ಬಿ. ಮುದ್ದನಗೌಡ್ರ, ಲೆಕ್ಕಪರಿಶೋಧನಾಧಿಕಾರಿಗಳು ಶ್ರೀ ಸಂತೋಷ ಸಣ್ಣಪ್ಪ ಮೀಶಿ, ಲೆಕ್ಕಪರಿಶೋಧನಾಧಿಕಾರಿಗಳು ಅಕ್ಷತಾ ಇಮಗೌಡನವರ, ಲೆಕ್ಕಪರಿಶೋಧನಾಧಿಕಾರಿಗಳು ಶ್ರೀ ಪ್ರದೀಪ ಕುಮಾರ, ಲೆಕ್ಕಪರಿಶೋಧನಾಧಿಕಾರಿಗಳು
7	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀ ದಿವಾಕರ ಶರಣಪ್ಪ, ಕೆ.ಎಸ್.ಎ.ಎಸ್. ಅಪರ ನಿರ್ದೇಶಕರು, ರಾಜ್ಯ ಲೆಕ್ಕಪರಿಶೋದನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ
8	ಪುನರ್ ಪರಿಶೀಲನಾ ದಿನಾಂಕ	17–10–2019

2) ಆಡಳಿತ ವರ್ಗದವರ ಹೆಸರು ಮತ್ತು ಅವಧಿ

1	ಅಧ್ಯಕ್ಷರು	1. ಶ್ರೀ ಅನ್ವರ ಮುಧೋಳ ದಿನಾಂಕ 01–04–2018 ರಿಂದ 2–06–2018 ವರೆಗ 2. ಡಾ॥ ಎಸ್. ಬಿ. ಬೊಮ್ಮನಹಳ್ಳಿ ಜಿಲ್ಲಾಧಿಕಾರಿಗಳು ದಿನಾಂಕ 02–06–2018 ರಿಂದ 18–07–2018 ವರೆಗೆ 3. ಶ್ರೀಮತಿ ಎಂ. ದೀಪಾ ಚೋಳನ್ ಜಿಲ್ಲಾಧಿಕಾರಿಗಳು ದಿನಾಂಕ 19–07–2018 ರಿಂದ 31–03–2019 ವರೆಗೆ
2	ಆಯುಕ್ತರು	1. ಶ್ರೀ ನಿಂಗಪ್ಪ ಎಚ್. ಕುಮ್ಮಣ್ಣನವರ ದಿನಾಂಕ 01–04–2018 ರಿಂದ 26–03–2019 2. ಶ್ರೀ ವಿವೇಕ ಎನ್. ಕಾರೇಕರ (ಪ್ರಭಾರ) ದಿನಾಂಕ 26–03–2019 ರಿಂದ 28–03–2019 3. ಶ್ರೀ ಪ್ರೀತಮ್ ನಸಲಾಪುರೆ (ಪ್ರಭಾರ) ದಿನಾಂಕ 29–03–2019 ರಿಂದ 31–03–2019
3	ನಗರ ಯೋಜನಾ ಸದಸ್ಯರು	1. ಶ್ರೀ ವಿವೇಕ ಎನ್. ಕಾರೇಕರ (ಪ್ರಭಾರ) ದಿನಾಂಕ 01–04–2018 ರಿಂದ 31–03–2019
4	ಕಾರ್ಯನಿರ್ವಾಹಕ ಅಭಿಯಂತರರು	1. ಶ್ರೀ ಎಚ್. ಪಿ. ಕರುಣಾಕರ ದಿನಾಂಕ 01–04–2018 ರಿಂದ 30–06–2018 2. ಶ್ರೀ ಎಂ. ರಾಜಶೇಖರ ದಿನಾಂಕ 30–06–2018 ರಿಂದ 31–03–2019
5	ಲೆಕ್ಕಪರಿಶೋಧನಾಧಿಕಾರಿಗಳು (ಪ್ರಭಾರ)	1. ಶ್ರೀ ಮೀನಾಕ್ಷಿ ಮೇಡ್ಲೇರಿ ದಿನಾಂಕ 01–04–2018 ರಿಂದ 31–03–2019

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2018–19 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಭಾಗ– 2

1. ಪೀಠಿಕೆ :

ಕರ್ನಾಟಕ ರಾಜ್ಯದ ಎರಡನೇಯ ದೊಡ್ಡ ನಗರವಾದ ಹುಬ್ಬಳ್ಳಿ–ಧಾರವಾಡ ಅವಳಿ ನಗರವು ಕೈಗಾರಿಕಾ ವಾಣಿಜ್ಯ, ವಿದ್ಯಾ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಂದುವರೆದಿದೆ. ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಯೋಜನಾಬದ್ಧ ಬೆಳವಣಿಗಾಗಿ 1966ರಲ್ಲಿ ಯೋಜನಾ ಪ್ರಾಧಿಕಾರದ ಸ್ಥಾಪನೆಯಾಯಿತು. ಮುಂದೆ 1976 ರಲ್ಲಿ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ನಗರ ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿಗಳನ್ನು ಒಂದು ಪ್ರಾಧಿಕಾರದ ಅಡಿಯಲ್ಲಿ ತರುವ ಉದ್ದೇಶದಿಂದ 1988 ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವಾಗಿ ರೂಪಗೊಂಡಿತು. ಹುಬ್ಬಳ್ಳಿ–ಧಾರವಾಡ ನಗರಗಳಿಗೆ ಹೊಂದಿಕೊಂಡ 63 ಗ್ರಾಮಗಳು ಈ ಯೋಜನೆಯಡಿ ವಿಲೀನಗೊಂಡಿವೆ.

ಮಹಾನಗರದ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಿ, ಕರ್ನಾಟಕ ನಗರ ಯೋಜನಾ ಕಾನೂನಿನ ಅಡಿಯಲ್ಲಿ ಸಮಗ್ರ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆ, ನಕಾಶೆ ತಯಾರಿಸುವುದರೊಂದಿಗೆ, ಯೋಜನಾಬದ್ಧ ಬೆಳವಣಿಗೆ ನಿಗದಿಗೊಳಿಸಲಾಗಿದೆ.

19–07–1988 ರಂದು ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ದೊರಕಿದೆ. ಇದರ ಪ್ರಕಾರ ಸ್ಥಳೀಯ ಯೋಜನಾ ಪ್ರದೇಶದ ಕ್ಷೇತ್ರ 413 ಚ.ಕಿ.ಮೀ. ಇದೆ. ಈಗ ಪರಿಷ್ಕೃತ ವ್ಯಾಪಾಕಾಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನ.ಅ.ಇ./ 201/ ಬೆಮಪ್ರಾ// 01 ದಿನಾಂಕ 12–11–2003 ರಡಿಯಲ್ಲಿ ಅಂತಿಮ ಅನುಮೋದನೆಯನ್ನು ನೀಡಿರುತ್ತದೆ. ಸದರೀ ಯೋಜನೆಯನ್ನು 2021 ನೇ ಇಸ್ವಿಗೆ ಅಂದಾಜಿಸಲಾದ 12.50 ಲಕ್ಷ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಗಳನ್ನು ಅಳವಡಿಸಲಾಗಿರುತ್ತದೆ. ಹಾಗೂ ಇದಕ್ಕೆ ಒಟ್ಟಾರೆಯಾಗಿ ಅಭಿವೃದ್ಧಿಗಾಗಿ 13,747=00 ಹೇಕ್ಟೇರ ಪ್ರದೇಶವನ್ನು ನಿಗದಿಗೊಳಿಸಲಾಗಿದೆ. ಈ ಪೈಕಿ ವಸತಿಗಾಗಿ 5883.72 ಹೇಕ್ಟೇರ ಪ್ರದೇಶವನ್ನು ಕಾಯ್ದಿರಿಸಲಾಗಿದೆ. ಸನ್ 2003ರಲ್ಲಿ ಅನುಮೋದನೆಗೊಂಡ ಪರಿಷ್ಕೃತ ವ್ಯಾಪಾಕಾನಿವೃದ್ಧಿ ಯೋಜನೆ0ಯನ್ನು ಪುನಃ 2011ರಲ್ಲಿ ಪರಿಷ್ಕರಿಸಲು ಕೈಗೆತ್ತಿಗೊಂಡಿ,ರುತ್ತದೆ. ಸದರಿ ಯೋಜನೆ0ಯನ್ನು 2015ರ ಅಂತ್ಯದ ವೇಳೆಗೆ ತಾತ್ಕಾಲಿಕ ಅಂಗೀಕಾರಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ನಿರೀಕ್ಷೆ0ಯಲ್ಲಿರುತ್ತದೆ. 2018–19ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಯಾವುದೇ ಪ್ರಕ್ರಿಯೆ ಜರುಗಿರುವುದಿಲ್ಲ.

ಪ್ರಾಧಿಕಾರದ ರಚನೆ :

ಪ್ರಾಧಿಕಾರವು ಈ ಕೆಳಕಂಡ ವಿಭಾಗಗಳನ್ನು ಹೊಂದಿರುತ್ತದೆ

ಅ) ಇಂಜನೀಯರಿಂಗ್ ವಿಭಾಗ

ಆ) ನಗರ ಯೋಜನಾ ವಿಭಾಗ

ಇ) ಭೂಸ್ವಾಧೀನ ವಿಭಾಗ

ಈ) ಆರ್ಥಿಕ ವಿಭಾಗ

ಉ) ಸಾಮಾನ್ಯ ಆಡಳಿತ ವಿಭಾಗ

ಅ) **ಇಂಜನೀಯರಿಂಗ್ ವಿಭಾಗ :** ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಇಂಜನೀಯರಿಂಗ್ ವಿಭಾಗದ ಪ್ರಾಥಮಿಕ ಕಾರ್ಯವಾಗಿರುತ್ತದೆ. ಪ್ರಾಧಿಕಾರದ ಬಡಾವಣೆಗಳಲ್ಲಿ ಸಿವ್ಹಿಲ್ ಅಭಿವೃದ್ಧಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಹಾಗೂ ವಿದ್ಯುತ್ ಸೌಕರ್ಯ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು ಮತ್ತು ಖಾಸಗಿ ಬಡಾವಣೆಗಳಲ್ಲಿ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ, ಈ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಆ) **ನಗರ ಯೋಜನಾ ವಿಭಾಗ :** ಅವಳಿ ನಗರಗಳಿಗೆ ವ್ಯಾಪಕ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಸಿದ್ದಪಡಿಸುವುದು ಹಾಗೂ ಬಡಾವಣೆ ನಕ್ಷೆಗಳನ್ನು ಸಿದ್ಧಪಡಿಸುವುದು ಸಮೂಹ ವಸತಿ ಯೋಜನೆಗಳ ಅಭಿವೃದ್ಧಿ ನಕ್ಷೆಗಳನ್ನು ಅನುಮೋದಿಸುವುದು ಯೋಜನಾ ವಿಭಾಗದ ಹೊಣೆಯಾಗಿದೆ.

ಇ) **ಭೂ ಸ್ವಾಧೀನ ವಿಭಾಗ :** ಇಂಜನೀಯರಿಂಗ್ ವಿಭಾಗದ ನಿಕಟ ಸಂಪರ್ಕವನ್ನು ಇಟ್ಟುಕೊಂಡು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು. ಭೂಸ್ವಾಧೀನ ವಿಭಾಗದ ಪ್ರಮುಖ ಕೆಲಸವಾಗಿರುತ್ತದೆ.

ಈ) **ಆರ್ಥಿಕ ವಿಭಾಗ :** ವಿವಿಧ ಹಣಕಾಸಿನ ವಿಷಯಗಳಲ್ಲಿ ಪ್ರಾಧಿಕಾರಕ್ಕೆ ಸಲಹೆ ನೀಡುವುದು ಹಾಗೂ ಪ್ರಾಧಿಕಾರದ ಲೆಕ್ಕ ಪತ್ರಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವುದು. ಆರ್ಥಿಕ ವಿಭಾಗದ ಹೊಣೆ ಆಗಿರುತ್ತದೆ.

1) ಹಿಂದಿನ ಲೆಕ್ಕ ಪರಿಶೋಧನಾ ವರದಿಗಳ ತೀರುವಳಿ ಕುರಿತು :–

ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಯಲ್ಲಿಯ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳು ಇತ್ಯರ್ಥಗೊಳ್ಳದೇ ಹಾಗೆ ಮುದುವರೆಯುತ್ತಿವೆ. ಸುಮಾರು ವರ್ಷಗಳಿಂದ ಕಂಡಿಕೆಗಳು ತಿರುವಳಿಯಾಗದೇ ಬಾಕಿ ಉಳಿದಿದ್ದು, ತೀರುವಳಿಗೆ ಪ್ರಾಧಿಕಾರವು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ದೀರ್ಘಕಾಲದಲ್ಲಿ ದಾಖಲೆಗಳ ಅಲಭ್ಯತೆ/ಹಾನಿ ಇತ್ಯಾದಿ ಕಾರಣಗಳಿದಾಗಿ ಬಾಕಿ ಕಂಡಿಕೆಗಳು ತೀರುವಳಿಯಾಗದೆ ಹಾಗೇ ಉಳಿಯುವ ಸಂಭವಿರುತ್ತದೆ. ಆದ್ದರಿಂದ ಆಕ್ಷೇಪಿತ ಮತ್ತು ವಸೂಲಾತಿ ಕಂಡಿಕೆಗಳಿಗ ವರ್ಷವಾರು ಅಂತಿಮ ಸ್ವರೂಪದ ಅನುಸರಣೆ ನೀಡಿ ತೀರುವಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

2017–18ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ಸಾಲಿನ ವರದಿಗಳಲ್ಲಿ ತೀರುವಳಿಯಾಗದೇ ಉಳಿದ ಆಕ್ಷೇಪಣೆ ಮತ್ತು ವಸೂಲಾತಿಗಳ ಕಂಡಿಕೆಗಳ ವಿವರಗಳು ಕೆಳಗಿನಂತಿವೆ.

ಅ.ನಂ.	ವರ್ಷ	ಆಕ್ಷೇಪಣೆ		ವಸೂಲಿ	
		ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ ಕಂಡಿಕೆ
1	1987–90	18	50,25,834.00	18	21,04,274.00
2	1990–91	04	3,39,520.00	11	5,60,167.00
3	1991–92	07	10,80,035.00	15	39,35,215.00
4	1992–93	04	55,76,022.00	06	35,52,309.00
5	1993–94	15	48,82,573.00	03	1,69,293.00
6	1994–95	05	13,32,573.00	06	1,66,56,933.00
7	1995–96	06	5,85,573.00	07	33,06,859.00
8	1996–97	08	40,08,589.00	07	6,72,383.00
9	1997–98	09	3,82,10,149.00	04	5,32,392.00
10	1998–99	04	56,80,175.00	01	4,937.00
11	1999–00	07	1,75,71,915.00	03	2,60,885.00
12	2000–01	12	1,26,07,978.00	08	72,652.00
13	2001–02	11	1,11,04,043.00	06	4,17,153.00
14	2002–03	07	65,91,989.00	03	3,01,864.00
15	2003–04	10	88,54,268.00	07	3,62,602.00
16	2004–05	08	1,22,41,136.00	03	3,70,330.00
17	2005–06	06	2,27,81,409.00	03	1,18,578.00
18	2006–07	05	1,22,75,022.00	03	16,04,247.00
19	2007–08	04	25,61,747.00	07	36,796.00
20	2008–09	02	10,31,124.00	06	75,018.00
21	2009–10	02	11,88,468.00	05	10,24,688.00
22	2010–11	07	28,53,049.00	03	24,049.00
23	2011–12	03	9,27270.00	03	3,89,868.00
24	2012–13	02	9,74,164.00	05	9,32,690.00
25	2013–14	06	245,55,786.00	06	15,92,053.00
26	2014–15	02	7,01,39,000.00	04	37,25,738.00
27	2015–16	03	2,38,81,270.00	–	–
28	2016–17	06	26,62,433.00	02	12,45,144.00
29	2017–18	02	5905858	01	11,25,184.00
	ಒಟ್ಟು ರೂ.	**183**	**30,74,28,972.00**	**156**	**4,51,74,301.00**

ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಘೋಷ್ವಾರೆ

ವಿವರ	ಆಕ್ಷೇಪಣೆ ಕಂಡಿಕೆಗಳು		ವಸೂಲಾತಿ ಕಂಡಿಕೆಗಳು	
	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ
2017–18 ರವರೆಗೆ	183	30,74,28,972.00	156	4,51,74,301.00
2018–19 ರ ಸೇರ್ಪಡೆ	08	52,096,144.00	04	14,89,187.00
ಒಟ್ಟು	191	35,95,25,116.00	160	4,66,63,488.00
2018–19 ರಲ್ಲಿ ತೀರುವಳಿ	00	00	00	00
2018–19 ರವರೆಗೆ	191	35,95,25,116.00	160	4,66,63,488.00

ಸಂಸ್ಥೆಯ ಆರ್ಥಿಕ ಸ್ಥಿತಿ :

ಲೆಕ್ಕ ಪರಿಶೋಧನೆಯ ಪ್ರಾರಂಭದ ದಿ: 28–08–2019 ರಂದು ಸಂಸ್ಥೆಯ ನಗದು ಪರಿಶೀಲಿಸಲಾಗಿ ನಗದು ಶಿಲ್ಕು ಶೂನ್ಯ ಇರುವುದು ಕಂಡು ಬಂದಿತು.

ಪ್ರಾಧಿಕಾರದ 2018–11 ನೇ ಸಾಲಿನ ವ್ಯವಹಾರ ಈ ಕೆಳಕಂಡಂತಿದೆ :–

1	ಪ್ರಾರಂಭದ ಶಿಲ್ಕು	54,55,71,863.98
2	ಸ್ವೀಕೃತಿ	13,39,07,612.29
3	ಒಟ್ಟು	67,94,79,476.27
4	ಖರ್ಚು	10,12,72,604.40
5	ಅಂತಿಮ ಶಿಲ್ಕು (31–03–2018 ಕ್ಕೆ)	57,82,06,871.87

ಬ್ಯಾಂಕ ಖಾತೆಗಳ ಮಾಹಿತಿ

Sl.No	Account Number	Name of Bank	Account Type	Purpose of opening of Account	O/B as on 01.04.2018	Receipt	Expenditure	Balance as on 31.03.2019
1	357701000001088	IOB	SB	General	50856418	575836590.90	603089117.80	23958059.10
2	357701000001188	IOB	SB	Ashray	60863.30	2157.00	17.70	63002.60
3	357701000001388	IOB	SB	SLAO	8456.30	258.00	53.10	8661.20
4	357704000000792	IOB	SB	Pension	4387559.17	3491714.39	4657139.80	3222133.76
5	34585469553	State Bank of India	Current	Net Banking	233356.50	1402836.00	1618341.00	134441.50
6	119110001631	Kotak Mahindra Bank	SB	General	2145832.68	1267301.00	1180.00	2692471.00

ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಠೇವಣಿಗಳ ಶಿಲ್ಕು ಈ ಕೆಳಗಿನಂತೆ ಇರುವುದು ಕಂಡು ಬರುತ್ತದೆ :–

1	ಬ್ಯಾಂಕ ಶಿಲ್ಕು	3,00,78,769.00
2	ಮುದ್ದತ್ತು ಠೇವಣಿ	54,92,00,000.00
3	ಪಿಂಚಣಿ ಮುದ್ದತ್ತು ಠೇವಣಿ	–
	ಒಟ್ಟು	**57,92,78,769.00**

ನಗದು ಪುಸ್ತಕದ ಶಿಲ್ಕು ಹಾಗೂ ಬ್ಯಾಂಕ ಶಿಲ್ಕುಗಳ ಸಮನ್ವಯ ಈ ಕೆಳಗಿನಂತೆ ಮಾಡಲಾಗಿದೆ. :-

1	ಸಾಮಾನ್ಯ ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು	57,82,06,871=87
2	ನಗದೀಕರಣಗೊಳ್ಳದೆ ಇರುವ ಚಕ್ಕುಗಳ ಮೊತ್ತ ಸೇರಿಲಾಗಿದೆ	19,30,210=00
	ಒಟ್ಟು	**58,01,37,180=00**
3	ಮರುಸಮನ್ವಯ ಮಾಡದಿರುವ ವ್ಯತ್ಯಾಸ	85,83,12=03
	ಅಂತು ಒಟ್ಟು	**57,92,78,769=84**

ರೂ. 8,58,312=00 ಗಳು ಹಿಂದಿನ ಸಾಲಿನಿಂದ ಅಂದರೆ 1992 ರಿಂದ ಮಾರ್ಚ 2008 ನಗದು ಪುಸ್ತಕಕ್ಕೆ ಹೆಚ್ಚಿನ ಜಮಾ ಎಂದು ತೋರಿಸಿದ್ದು, ನಗದು ಪುಸ್ತಕದ ಅಸಮರ್ಪಕ ನಿರ್ವಹಣೆಗೆ ಸಾಕ್ಷಿಯಾಗಿದೆ. ಈ ವ್ಯತ್ಯಾಸದ ಬಗ್ಗೆ ಶೀಘ್ರವೇ ಪರಿಶೀಲನೆ ಮಾಡಿ ಪೂರ್ಣ ಪ್ರಮಾಣದಲ್ಲಿ ಮರುಸಮನ್ವಯ ಮಾಡಲು ಸೂಚಿಸಿದೆ.

ಪ್ರಾಧಿಕಾರವು ಒಟ್ಟು 06 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ರಾಷ್ಟ್ರೀಕೃತ ಬ್ಯಾಂಕ್ / ಷೆಡ್ಯೂಲ್ ಬ್ಯಾಂಕ್ ಅಲ್ಲದಿರುವ ಕೋಟಕ್ ಮಹಿಂದ್ರಾ ಬ್ಯಾಂಕಿನಲ್ಲಿ ಖಾತೆ ನಿರ್ವಹಿಸುವುದು ಆಕ್ಷೇಪಾರ್ಹ – ಬ್ಯಾಂಕ್ ಖಾತೆವಾರು ಜಮಾ ಮತ್ತು ವೆಚ್ಚಗಳ ವಿವರ, ಭಾಗಶಃ ಮರುಸಮನ್ವಯ ವಿವರಗಳನ್ನು ಮತ್ತು ಠೇವಣಿಗಳ ಶಿಲ್ಕುಗಳ ವಿವರಗಳನ್ನು ಅನುಬಂಧ-1 ರಲ್ಲಿ ವಿವರಗಳನ್ನು ನೀಡಲಾಗಿದೆ. ರೂ.54,92,00,000=00 ಮುದ್ದತ ಠೇವಣಿಯಲ್ಲಿ ಠೇವಣಿಯಿಂದ ಬಂದ ಬಡ್ಡಿ ಹಣ ಹಾಗೂ ಉಳಿತಾಯ ಖಾತೆ ಬಡ್ಡಿ ಹಣ ನಗದು ಜಮಾ ತೆಗೆದುಕೊಳ್ಳದಿರುವ ಮೊತ್ತ ಮತ್ತು 3 ತಿಂಗಳಿಗಿಂತ ಹೆಚ್ಚಿನ ಅವಧಿಯಲ್ಲಿ ನಗಧೀಕರಣವಾಗದೇ ಇರುವ ಚೆಕ್ಕುಗಳ ಮೊತ್ತ ಸೇರಿದೆ. ಸಮನ್ವಯ ಮಾಹಿತಿ ನಗದು ಪುಸ್ತಕದಲ್ಲಿ ದಾಖಲಿಸಿದ್ದು ರೂ 19,30,210-00ಗಳು 2012 ರಿಂದ 2019 ಅವಧಿಯ ನಗದೀಕರಣಗೊಳ್ಳದ ಚೆಕ್‌ಗಳಿಂದ ಕೂಡಿದೆ ಎಂದು ದಾಖಲಿಸಿದ್ದು, ನಿಯಮಬದ್ಧವಲ್ಲ. ಬಹಳ ವರ್ಷಗಳಿಂದ ಬಾಕಿ ಇರುವ ನಗದೀಕರಣಗೊಳ್ಳದ ಚೆಕ್‌ಗಳ ಮೊತ್ತವನ್ನು ಮರು ಜಮೆ ತೆಗೆದುಕೊಂಡು ಮರುಸಮನ್ವಯ ಪೂರ್ಣಗೊಳಿಸುವುದು ಅತ್ಯವಶ್ಯ.

ನಗದು ಪುಸ್ತಕ ಪರಿಶೀಲನೆ ಕುರಿತು :-

ನಗದು ಪುಸ್ತಕಕ್ಕೆ ಪೂರಕವಾಗಿ ಜನರಲ್ ಲೆಡ್ಜೆರ್ಸ ನಿರ್ವಹಿಸಿಲ್ಲ. ಅದರಂತೆ ಮೇಲೆ ತಿಳಿಸಿದಂತೆ ಪಾವತಿ ವಿಭಾಗದಲ್ಲಿ ಯಾರಿಗೆ ಪಾವತಿ ಮಾಡಿದೆ ಎಂದು ಹಾಗೂ ಜಮೆಯ ಭಾಗದಲ್ಲಿ ಯಾರಿಂದ ಬಂದಿದೆ ಎಂಬ ಮಾಹಿತಿ ಇಲ್ಲ.

4) ಅಂಚೆ ಚೀಟಿ ಶಿಲ್ಕು :

ಲೆಕ್ಕ ಪರಿಶೋಧನೆಯ ಪ್ರಾರಂಭದ ದಿನಾಂಕ 28-08-2019 ರಂದು ಅಂಚೆ ಚೀಟಿ ಪರಿಶೀಲಿಸಲಾಗಿ ರೂ. 31,738.00 ಅಂಚೆ ಚೀಟಿಗಳು ಆರಂಭಿಕ ಶಿಲ್ಕಿನಲ್ಲಿ ಇರುವುದು ಕಂಡು ಬಂದಿತು. ದಿನಾಂಕ 31-03-2019 ರ ದಾಸ್ತಾನು ವಹಿ ಪರಿಶೀಲಿಸಲಾಗಿ ವರ್ಷದ ಕೊನೆಯ ಶಿಲ್ಕು ರೂ. 24,918/- ಗಳು ಇರುತ್ತದೆ. ಈ ವಿವರ ಕೆಳಗಿನಂತಿದೆ.

ದಿ. 01/04/2018 ರ ಆರಂಭದ ಶಿಲ್ಕು	ರೂ. 31,738=00
2018-19 ರ ಖರೀದಿ	ರೂ. 30,000=00
ಒಟ್ಟು ಮೊತ್ತ	ರೂ. 61,738=00
2018-19 ರಲ್ಲಿ ಬಳಕೆ	ರೂ. 36,820=00
31-03-2019 ರ ಅಂತಿಮ ಶಿಲ್ಕು	ರೂ. 24,918=00

ಆಯವ್ಯಯ ಪತ್ರ :

1987 ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ ಕಲಂ 43 ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯ ಪತ್ರವನ್ನು ಹಿಂದಿನ ವರ್ಷದ ಫೆಬ್ರುವರಿ 1ನೇ ದಿನಾಂಕಕ್ಕಿಂತ ಮೊದಲು ಪ್ರಾಧಿಕಾರದ ಒಪ್ಪಿಗೆಗಾಗಿ ಮಂಡಿಸಬೇಕಾಗುತ್ತದೆ. ಆದರೆ, 2018-19 ನೇ ಸಾಲಿನ ಆಯವ್ಯಯ ಮಂಜೂರಾತಿ ದಿನಾಂಕ: 26-06-2019 ರಂದು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಿರುತ್ತಾರೆ.

ಆಯವ್ಯಯ ವಿವರ ಈ ಕೆಳಗಿನಂತಿದೆ

2018-19 ನೇ ಸಾಲಿನ ಆಯವ್ಯಯ ಪತ್ರದ ವಾಸ್ತವಿಕ ನಿರ್ವಹಣೆಯ ಅಂಕಿ ಅಂಶವು ಈ ಕೆಳಗಿನಂತಿವೆ.

ವಿವರ	ಅಂದಾಜು	ವಾಸ್ತವಿಕ	ವ್ಯತ್ಯಾಸ
2018-19 ನೇ ಸಾಲಿನ ಆದಾಯ	503181000	61532308	44164892
2018-19 ನೇ ಸಾಲಿನ ವೆಚ್ಚ	471210000	65711572	405498428

ಪ್ರಾಧಿಕಾರದಲ್ಲಿ ಸಿದ್ಧಪಡಿಸಲಾದ ಆಯ-ವ್ಯಯಕ್ಕೂ ಹಾಗೂ ಪ್ರಾಧಿಕಾರವು ಲೆಕ್ಕ ಪರಿಶೋಧನೆಗೆ ಒದಗಿಸಿದ ವಾಸ್ತವಿಕ ಆದಾಯ ಮತ್ತು ವೆಚ್ಚಗಳ ತಃಖ್ತೆಯ ನಡುವೆ ಹೆಚ್ಚಿನ ವ್ಯತ್ಯಾಸವಿರುವುದು. ಆಯವ್ಯಯವನ್ನಯು ಸಿದ್ಧಪಡಿಸುವಾಗ ವಾಸ್ತವಿಕವಾಗಿ ಬರಬಹುದಾದ ಆದಾಯ ಮತ್ತು ವೆಚ್ಚ ಮಾಡಬಹುದಾದ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ರೀತಿಯಲ್ಲಿ ಸಿದ್ಧಪಡಿಸಲು ಹಲವಾರು ವರ್ಷಗಳಿಂದ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸುತ್ತಾ ಬರಲಾದರೂ ಅಗತ್ಯ ಕ್ರಮ ಜರುಗಿಸದೇ ಇರುವುದು ಆಕ್ಷೇಪಾರ್ಹ ವಾಸ್ತವ್ಯಕ್ಕೆ ಹತ್ತಿರವಿರುವಂತೆ ಆಯ-ವ್ಯಯವನ್ನು ಸಿದ್ಧಪಡಿಸಲು ಸೂಚಿಸಿದೆ.

6. ಸಾಮಾನ್ಯ ಆದಾಯ ಹಾಗೂ ಸಾಮಾನ್ಯ ವೆಚ್ಚಗಳು

ಪ್ರಾಧಿಕಾರದ 2016-17 ರಿಂದ ಮೂರು ವರ್ಷಗಳ ಸಾಮಾನ್ಯ ಆದಾಯ ಹಾಗೂ ಸಾಮಾನ್ಯ ವೆಚ್ಚಗಳ ವಿವರವು ಈ ಕೆಳಗಿನಂತೆ ಇರುತ್ತದೆ.

ಅ.ನಂ.	ಅವಧಿ	ಸ್ವೀಕೃತಿ ಸಾಮಾನ್ಯ (ರೂ. ಗಳಲ್ಲಿ)	ಸಾಮಾನ್ಯ ವೆಚ್ಚ (ರೂ. ಗಳಲ್ಲಿ)
1	2016-17	31,05,85,401=00	31,79,05,023=00
2	2017-18	30,16,51,562=00	24,52,79,813=00
3	2018-19	13,39,07,612=29	10,12,72,604=40
	ಒಟ್ಟು	**74,61,44,575.29**	**66,44,57,440.40**
4	ಸರಾಸರಿ	24,87,14,858.00	22,14,85,813.33
5	ವೆಚ್ಚಕ್ಕಿಂತ ಆದಾಯಹೆಚ್ಚು	---	3,26,35,008.00

1. ಮೇಲಿನಂತೆ ಹೋಲಿಕೆ ಮಾಡಲಾಗಿ ಆದಾಯವು ಪ್ರತಿ ವರ್ಷ ಕುಂಠಿತವಾಗಿರುವುದು ಕಂಡು ಬರುತ್ತದೆ.
2. ಹಿಂದಿನ 3 ವರ್ಷಗಳ ಸಾಮಾನ್ಯ ಆದಾಯ ಸಾಮಾನ್ಯ ವೆಚ್ಚಗಳ ವಿವರಗಳನ್ನು ಪರಿಶೀಲಿಸಿದಾಗ ಸಾಮಾನ್ಯ ವೆಚ್ಚಕ್ಕಿಂತ ಆದಾಯ ಹೆಚ್ಚು ಇರುವುದು ಕಂಡು ಬರುತ್ತದೆ.
3. ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಬಾಕಿ ಉಳಿದ ವಿವಿಧ ನಿವೇಶನಗಳನ್ನು ಕೂಡಲೇ ವಿಲೇವಾರಿ ಮಾಡಿ ಸಂಸ್ಥೆಯ ಹಣಕಾಸಿನ ಸ್ಥಿತಿಯನ್ನು ಉನ್ನತೀಕರಿಸಿಕೊಳ್ಳಬಹುದು. ಅಲ್ಲದೇ, ನಿವೇಶನದ ವಿನ್ಯಾಸವನ್ನು ಪ್ರಾಧಿಕಾರದಿಂದ ಕೈಕೊಳ್ಳುವಾಗ ಸಾರ್ವಜನಿಕರ ಬೇಡಿಕೆಯ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ಹೊಸ ವಿನ್ಯಾಸ ರಚನೆಗೆ ಕ್ರಮವಹಿಸಲು ಸೂಚಿಸಿದೆ. ತಪ್ಪಿದಲ್ಲಿ ಅನಿವಾರ್ಯವಾಗಿ ಪ್ರಾಧಿಕಾರವು ನಷ್ಟವನ್ನು ಅನುಭವಿಸಬೇಕಾಗುತ್ತದೆ.

7) ವಾರ್ಷಿಕ ಲೆಕ್ಕಗಳ ಬಗ್ಗೆ :

ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಸನ್ನದು ಲೆಕ್ಕಪರಿಶೋಧಕರಿಂದ ತಯಾರಿಸಿ ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಇದರಿಂದಾಗಿ ಪ್ರಾಧಿಕಾರವು ತಯಾರಿಸಿದ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಆದಾಯ ಮತ್ತು ವೆಚ್ಚದ ತಖ್ತೆ ಹಾಗೂ ಸಮತೋಲನಾ ಪಟ್ಟಿಯೊಂದಿಗೆ ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ವಾರ್ಷಿಕ ಲೆಕ್ಕಪತ್ರಗಳಿಗೆ ಷೆಡ್ಯೂಲ್‌ಗಳನ್ನು ಒದಗಿಸಿಲ್ಲ. ಇದರಿಂದಾಗಿ ಲೆಕ್ಕ ಪತ್ರಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲ.

2018-19ನೇ ಸಾಲಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಲೆಕ್ಕಪತ್ರಗಳ ಬ್ಯಾಲನ್ಸ ಶೀಟ್‌ನಲ್ಲಿ ರೂ. 1,58,83,144.00 ಗಳಷ್ಟು ಟಿ.ಡಿ.ಎಸ್. ಮೊತ್ತವನ್ನು ಸ್ವೀಕೃತವಾಗುವ ಆಸ್ತಿ ಎಂದು ಸನ್ನದು ಲೆಕ್ಕಪರಿಶೋಧಕರಾದ ಚರಂತಿಮಠ ಅಸೋಸಿಯೇಟ್ಸ ಹುಬ್ಬಳ್ಳಿ ಇವರಿಂದ ದೃಢೀಕರಿಸಲಾಗಿದೆ. ಟಿ.ಡಿ.ಎಸ್. ಮೊತ್ತವನ್ನು ಆಸ್ತಿ ಸ್ವೀಕೃತಿ ಭಾಗದಲ್ಲಿ ನಮೂದಿಸಿರುವ ಕುರಿತು ಸೂಕ್ತ ಉತ್ತರವನ್ನು ಪ್ರಾಧಿಕಾರದಿಂದ ಒದಗಿಸಲಾಗಿಲ್ಲ. ಆದಾಯ ಮತ್ತು ವೆಚ್ಚದ ತಖ್ತೆಯಲ್ಲಿ ಕೊರತೆ ಅಡಿ ತೋರಿಸಲಾದ ರೂ. 41,79,264/-ಗಳನ್ನು ಯಾವ ಲೆಕ್ಕ ಶೀರ್ಷಿಕೆಯಿಂದ ಪುನರ್ವಿನಿಯೋಗ ಮಾಡಲಾಗಿದೆ ಎನ್ನುವ ವಿವರಣೆ ನೀಡಲಾಗಿಲ್ಲ.

ಅ) ಆಸ್ತಿ ಮತ್ತು ಋಣಗಳು:-

2018-19 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಪ್ರಾಧಿಕಾರದ ಆಸ್ತಿ ಋಣಗಳ ಕುರಿತ ವಿವರ ಒದಗಿಸಿದ ಮಾಹಿತಿಗಳಂತೆ ಆಸ್ತಿಗಳ ಮತ್ತು ಋಣಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಪ್ರಾಧಿಕಾರದ ಆಸ್ತಿಗಳು ಋಣಗಳಿಗಿಂತ ಹೆಚ್ಚಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ, ನಿಯಮಾನುಸಾರ ನಿವೇಶನಗಳ ವಿಲೇವಾರಿ ಮಾಡಿ ಪ್ರಾಧಿಕಾರದ ಆಸ್ತಿ ಉತ್ತಮಪಡಿಸಿಕೊಂಡು ಹುಬ್ಬಳ್ಳಿ-ಧಾರವಾಡ ನಗರದ ವ್ಯಾಪ್ತಿಯಲ್ಲಿ ನೂತನ ವಿನ್ಯಾಸ ರಚನೆ ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಪ್ರಾಧಿಕಾರದಿಂದ ಒದಗಿಸಲಾದ ವಿವರವನ್ನು **ಅನುಬಂಧ- 2 ರಲ್ಲಿ ನೀಡಲಾಗಿದೆ.**

ಪ್ರಾಧಿಕಾರವು ಒದಗಿಸಿದ ಮಾಹಿತಿಯಂತೆ ಆರ್ಥಿಕ ವರ್ಷದ ಅಂತ್ಯದಲ್ಲಿ ಆಸ್ತಿ ಮತ್ತು ಋಣಗಳ ಪಟ್ಟಿಯನ್ನು ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1) KUDA ACT section 43 to 48 ಹಾಗೂ Karnataka town and country planning act 1961 ನಿಯಮ 68 a ಯಿಂದ 68 d ಯಲ್ಲಿ ವಿವರಿಸಿದಂತೆ ನಿಗದಿಪಡಿಸಿದ ಫಾರ್ಮ್ 01 ರ ನಮೂನೆಯಂತೆ ನಿರ್ವಹಿಸಲಾಗಿರುವುದಿಲ್ಲ.

2) ಪ್ರಾಧಿಕಾರವು ಆಸ್ತಿ ವಹಿಯನ್ನು ನಿರ್ವಹಿಸದೆ ಇರುವುದರಿಂದ ಆಸ್ತಿ ಮತ್ತು ಋಣ ಪಟ್ಟಿಯಲ್ಲಿ ತೋರಿಸಲಾದ ಆಸ್ತಿಗಳು ಯಾವುವು ಎಂಬುದನ್ನು ಕಂಡುಕೊಳ್ಳಲು, ಹಾಗೂ ಆಸ್ತಿಗಳ ಸವಕಳಿ ಮತ್ತು ಹೊಸದಾಗಿ ಸೃಜಿಸಲಾದ ಆಸ್ತಿಗಳ ವಿವರ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ

3) ಆಸ್ತಿ ಮತ್ತು ಋಣ ಪಟ್ಟಿಯಲ್ಲಿ ತೋರಿಸಲಾದ ಮುಂಗಡವು ರೂ.1,69,30,964.00/- ಇದ್ದು ಮುಂಗಡಗಳ ವಹಿ ನಿರ್ವಹಿಸಿ ಲೆಕ್ಕತನಿಖೆಗೆ ಒದಗಿಸದೆ ಇರುವುದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

4) ಆಸ್ತಿ ಮತ್ತು ಋಣ ಪಟ್ಟಿಯಲ್ಲಿ ತೋರಿಸಲಾದ ಬರತಕ್ಕ ಆದಾಯಗಳ ಅಡಿಯಲ್ಲಿ ಪ್ರಾಧಿಕಾರಕ್ಕೆ ಬರಬೇಕಾದ ಇನ್ನಿತರೆ ಆದಾಯ ಮೂಲಗಳಾದ ಕಟ್ಟಡ ಬಾಡಿಗೆ, ನಾಗರೀಕ ಸೌಲಭ್ಯ ನಿವೇಶನಗಳಿಂದ ಬರಬೇಕಾದ ಬಾಕಿ ಹಾಗೂ ಇನ್ನಿತರೆ ಆದಾಯಗಳನ್ನು ತೋರಿಸದೆ ಅಪೂರ್ಣ ಮಾಹಿತಿಯನ್ನು ತೋರಿಸಲಾಗಿದೆ

ಕಾರಣ ಪ್ರಾಧಿಕಾರವು ಒದಗಿಸಿದ ಆಸ್ತಿ ಮತ್ತು ಋಣ ಪಟ್ಟಿಯು ಸತ್ಯ ಮತ್ತು ವಾಸ್ತವಿಕ ಮಾಹಿತಿಯನ್ನು ತಿಳಿಸುವುದಿಲ್ಲ.

ಬ) ಪ್ರಾಧಿಕಾರದ ಲೆಕ್ಕಪತ್ರಗಳನ್ನು ದ್ವಿನಮೂದು ಲೆಕ್ಕಪದ್ಧತಿಯಲ್ಲಿ ನಿರ್ವಹಿಸದಿರುವುದು:-

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ನಿಯಮ 131 ರಂತೆ ಆಯುಕ್ತರ ಅಧಿಕಾರಗಳು ಮತ್ತು ಕರ್ತವ್ಯಗಳು 2(2) ರಂತೆ ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿರ್ವಹಿಸುವುದು ಅವಶ್ಯ. ಪ್ರಾಧಿಕಾರದ ಲೆಕ್ಕಪತ್ರಗಳನ್ನಿಡುವುದಕ್ಕೆ ಜವಾಬ್ದಾರರಾಗಿರುವಂತೆ, ಯೋಜನೆಗಳು, ಬಡಾವಣೆಗಳ ಸ್ಥಿರ ಮತ್ತು ಚರ ಆಸ್ತಿಗಳನ್ನು ಮತ್ತು ನಿಯಮ 16(1) ರಂತೆ, ಸಾರ್ವಜನಿಕ ಉದ್ಯಾನವನ, ಆಟದ ಮೈದಾನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಪ್ರದೇಶಗಳು ಹಾಗೂ ನಿಯಮ 32 ರಂತೆ ಖಾಸಗಿ ಬಡಾವಣೆಗಳಲ್ಲಿ ನಿಯಮ 35(5) ರಂತೆ ಪ್ರಾಧಿಕಾರದ ಮಾಲೀಕತ್ವಕ್ಕೆ ಬಿಟ್ಟುಕೊಡುವ ಸ್ಥಿರ ಆಸ್ತಿಗಳು ಹಾಗೂ ಬ್ಯಾಂಕ್ ಸಾಲಗಳ ತೀರುವಳಿ, ಜಮಾ ಮತ್ತು ಖರ್ಚಿನಂತೆ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಜೋಡು ನಮೂದು ಲೆಕ್ಕಪದ್ಧತಿ ವ್ಯವಸ್ಥೆಯಲ್ಲಿ ನಿರ್ವಹಿಸುವುದು ಅಗತ್ಯವಾಗಿರುತ್ತದೆ. ವಾರ್ಷಿಕ ಲೆಕ್ಕಪತ್ರಗಳು ಸಾಮಾನ್ಯವಾಗಿ ಈ ಘಟಕಗಳನ್ನೊಳಗೊಂಡಿದೆ.

1) Balance Sheet
2) Income and Expenditure Account
3) Receipt and Payment Account
4) Schedules to the above Financial Statement

ಆರ್ಥಿಕ ಲೆಕ್ಕಪತ್ರಗಳ ಪ್ರತಿಯೊಂದು ಘಟಕಗಳಿಗೆ ಈ ವರ್ಷದ ಆರ್ಥಿಕ ವಿವರದೊಂದಿಗೆ ಹಿಂದಿನ ವರ್ಷದ ಆರ್ಥಿಕ ವಿವರಣೆಯಿರುವುದು ಅಗತ್ಯವಾಗಿದೆ. ಆರ್ಥಿಕ ಲೆಕ್ಕಪತ್ರವನ್ನು ಪೂರ್ಣಗೊಳಿಸಲು ಎಲ್ಲ ಸ್ಥಿಕೃತಿ, ಪಾವತಿ ಮತ್ತು ಆರ್ಥಿಕ ಆಸ್ತಿ/

ಹೊಣೆಗಾರಿಕೆಯ ಪೂರ್ಣ ವಿವರಗಳನ್ನು ಪಡೆಯಬೇಕಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ (Indian Accounting Standards) ಅನ್ವಯ ವಾರ್ಷಿಕ ಲೆಕ್ಕಪತ್ರಗಳ ಭಾಗವಾದ ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆಯಲ್ಲಿ ದ್ವಿ ನಮೂದು ಪದ್ಧತಿಯ ಪ್ರಕಾರ, ಆಯಾ ವರ್ಷಕ್ಕೆ ಸಂಬಂಧಿಸಿದಂತೆ ಸಂಚಯಿಸಿದ (Accrued) ಆದಾಯ ಮತ್ತು ವೆಚ್ಚಗಳು(ರಾಜಸ್ವ ಸ್ವೀಕೃತಿಯಾಗಿರಲೀ ಅಥವಾ ಸ್ವೀಕೃತಿಯಾಗದಿರಲೀ ಹಾಗೆಯೆ ವೆಚ್ಚಗಳು ಪಾವತಿಯಾಗಿರಲೀ ಅಥವಾ ಪಾವತಿಯಾಗದಿರಲೀ) ಇವುಗಳನ್ನು ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ಆ ವರ್ಷದ ನಿಖರವಾದ ಆದಾಯ ಮತ್ತು ವೆಚ್ಚಗಳನ್ನು ತೋರಿಸುವುದು ಅನಿವಾರ್ಯವಾಗಿರುತ್ತದೆ.

ಈ ರೀತಿ ಕ್ರಮಬದ್ಧವಾದ ಲೆಕ್ಕಪತ್ರವನ್ನು ನಿರ್ವಹಿಸಬೇಕಾದರೆ ಸಂಬಂಧಿಸಿದ ಸ್ವೀಕೃತಿಗಳ ಕುರಿತು ಸಂಬಂಧಿಸಿದ ವರ್ಷದಲ್ಲಿ ಪಾವತಿಸಿಕೊಳ್ಳಬೇಕಾದ ಶುಲ್ಕಗಳು, ದಂಡಗಳು ಮತ್ತು ಇತ್ಯಾದಿ ಸ್ವೀಕೃತಿಗಳ ಮೊತ್ತ, ಪಾವತಿಯಾಗಿರುವ ಮೊತ್ತ ಹಾಗೂ ಬಾಕಿಯಿರುವ ಮೊತ್ತದ ತಃಖ್ತೆಯನ್ನು (Demand, Collection & Balance-DCB) ಕಡ್ಡಾಯವಾಗಿ ನಿರ್ವಹಿಸಬೇಕಾಗಿರುತ್ತದೆ. ಈ ಮಾಹಿತಿಯಿಲ್ಲದೆ ಹಾಗೂ ಈ ಮಾಹಿತಿಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸದೆ ಕೇವಲ ಪಾವತಿಸಿಕೊಂಡಿರುವ ಮೊತ್ತಗಳನ್ನು ಮಾತ್ರ ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿದ್ದು, ಇದರಿಂದಾಗಿ, ದ್ವಿನಮೂದು ಪದ್ಧತಿಯಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸಂಚಯನ ಪದ್ಧತಿಯನ್ನು (Accrual System) ಸಂಪೂರ್ಣವಾಗಿ ಪಾಲಿಸದಂತಾಗುವುದಿಲ್ಲ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ನೈಜವಾದ ಮತ್ತು ನ್ಯಾಯೋಚಿತ ವ್ಯವಹಾರಗಳನ್ನು ಮಂಡನೆ ಮಾಡಿದಂತಾಗುವುದಿಲ್ಲ.

ಪ್ರಾಧಿಕಾರವು ಒದಗಿಸಿದ (ಎ) ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು (ಬಿ) ಆದಾಯ ಮತ್ತು ವೆಚ್ಚಗಳ ತಃಖ್ತೆಗಳ ಪರಿಶೀಲನೆಯಲ್ಲಿ ಆರ್ಥಿಕ ವಹಿವಾಟಿನ ಸಂಪೂರ್ಣ ವಿವರಗಳನ್ನು ದಾಖಲಿಸಲಾಗಿರುವುದಿಲ್ಲ, ಆದಾಯ ಮತ್ತು ವೆಚ್ಚಗಳ ತಃಖ್ತೆಯಲ್ಲಿ ತೋರಿಸಿದಂತೆ ಆದಾಯಕ್ಕಿಂತ ವೆಚ್ಚವು ರೂ.41,79.264.00/- ಹೆಚ್ಚಾಗಿದ್ದು ಆದರೆ ಬುಕ್ ಬ್ಯಾಲೆನ್ಸ್ ಪ್ರಕಾರ 32635007.89/- ರೂಗಳು ವೆಚ್ಚಕಿಂತ ಆದಾಯ ಹೆಚ್ಚು ಕಂಡು ಬಂದಿರುತ್ತದೆ ಹಾಗೂ ನಿಗದಿ ಪಡಿಸಿದ ನಮೂನೆಯಲ್ಲಿ ಆದಾಯ ಮತ್ತು ವೆಚ್ಚಗಳ ತಃಖ್ತೆಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಕಾರಣ ಪ್ರಾಧಿಕಾರವು ಒದಗಿಸಿದ ಆದಾಯ ಮತ್ತು ವೆಚ್ಚಗಳ ತಃಖ್ತೆಯ ಸತ್ಯ ಮತ್ತು ವಾಸ್ತವ ಅಂಕಗಳ ಬಗ್ಗೆ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

ಮೇಲೆ ವಿವರಿಸಿದಂತೆ ಪ್ರಾಧಿಕಾರದ ವಾರ್ಷಿಕ ಲೆಕ್ಕಪತ್ರಗಳಲ್ಲಿ ವಾರ್ಷಿಕ ಲೆಕ್ಕಪತ್ರಗಳ ಘಟಕಗಳನ್ನೊಳಗೊಂಡ ವಿವರಣೆಗಳು ಇರುವುದಿಲ್ಲ. ನಗದು ಪುಸ್ತಕದ ಆಧಾರದಲ್ಲಿ ಸ್ವೀಕೃತಿ ಮತ್ತು ಪಾವತಿಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿರುವುದರಿಂದ, ಲೆಕ್ಕಪರಿಶೋಧನೆಗೆ ಒದಗಿಸಲಾದ ಲೆಕ್ಕಪತ್ರಗಳು ತಪ್ಪುಗಳಿಂದ ಹೊರತಾಗಿದೆ ಮತ್ತು ಆರ್ಥಿಕ ಸ್ಥಿತಿಯ ನೈಜ ಚಿತ್ರಣವನ್ನು ನೀಡುತ್ತದೆ ಎಂಬುದರ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

8) ವರ್ಗೀಕೃತ ಜಮಾ ಖರ್ಚು :-

ಪ್ರಾಧಿಕಾರದ 2018-19 ನೇ ಸಾಲಿನ ವರ್ಗೀಕೃತ ಜಮಾ/ಖರ್ಚು ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. ಜಮಾ-ಖರ್ಚುಗಳ ವಿವರಗಳು ಈ ಕೆಳಗಿನಂತಿದೆ.

1	ಪ್ರಾರಂಭದ ಶಿಲ್ಕು	545571863.98
2	ಸ್ವೀಕೃತಿ	33907612.29
3	ಒಟ್ಟು	679479476.27
4	ಖರ್ಚು	101272604.40
5	ಅಂತಿಮ ಶಿಲ್ಕು (31-03-2019 ಕ್ಕೆ)	578206871.87

ಜಮಾ / ಖರ್ಚುಗಳ ಮಾಸಿಕ ವಿವರವನ್ನು ಮಾತ್ರ ಒದಗಿಸಿದ್ದು ನಿಗದಿತ ನಮೂನೆಯಲ್ಲಿ ವಾರ್ಷಿಕ ಲೆಕ್ಕವನ್ನು ಒದಗಿಸಿರುವುದಿಲ್ಲ. ಶೀರ್ಷಿಕೆವಾರು / ಯೋಜನೆವಾರು ಖರ್ಚು/ವೆಚ್ಚ ನಿರ್ವಹಿಸಲು ಸೂಕ್ತ ಕ್ರಮ ಜರುಗಿಸುವುದು.

9) ಪಾವತಿ ಪುಸ್ತಕಗಳ ಕುರಿತು:-

ಪ್ರಾಧಿಕಾರದಲ್ಲಿ ಹಣಕಾಸಿನ ಎಲ್ಲಾ ವ್ಯವಹಾರ ನೇರವಾಗಿ ಬ್ಯಾಂಕ ಚಲನ್‌ಗಳ ಮೂಲಕವೇ ನಡೆಸುತ್ತಿದ್ದು ಯಾವುದೇ ರಶೀದಿ ಪುಸ್ತಕಗಳನ್ನು ಹಣ ಸ್ವೀಕೃತಿಗಾಗಿ ಬಳಸಿರುವುದಿಲ್ಲ.

10) ಠೇವಣಿಗಳು :

ಅ) ಮುದ್ದತ ಠೇವುಗಳ ಪರಿಶೀಲನೆ:-

ಅ) ದಿನಾಂಕ: 31/03/2019 ಕ್ಕೆ ರೂ.54,92,00,000/-ಗಳಷ್ಟು ಮೌಲ್ಯದ ಎಫ್.ಡಿ.ಆರ್.ಗಳು ಇರುವುದನ್ನು ಪರಿಶೀಲಿಸಲಾಯಿತು. ಇದಕ್ಕೆ ಸಂಬಂಧಪಟ್ಟ ವಹಿ ನಿರ್ವಹಿಸಿ ಪ್ರತಿ ತಿಂಗಳು ಸಂಕ್ಷಿಪ್ತ ವಿವರ ದಾಖಲಿಸತಕ್ಕದ್ದು, ಈ ಕುರಿತು ವಾಚ್ ರಜಿಸ್ಟರ ನಿರ್ವಹಿಸುವುದು. ಲೆಕ್ಕಪತ್ರ ಕ್ರಮಬದ್ಧವಾಗಿಡಲು ಸೂಕ್ತ ಕ್ರಮ ಜರುಗಿಸುವುದು. ದಿ:05/09/2019 ರಂದು ಎಫ್.ಡಿ.ಆರ್ ಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.54,92,00,000/- ಇರುವುದು ಕಂಡು ಬಂದಿತು. ಸದರಿ ಮೊತ್ತದ ವಿವರಣೆಯನ್ನು ಅನುಬಂಧ-4 ರಲ್ಲಿ ನೀಡಲಾಗಿದೆ. ಎಫ್.ಡಿ.ಆರ್ ಗಳನ್ನು ವಿವಿಧ ಬ್ಯಾಂಕಗಳಲ್ಲಿ ಮುದ್ದತ ಠೇವಣಿ ಮಾಡಲಾಗಿದೆ. ಠೇವಣಿಗಳನ್ನು ಲೆಕ್ಕ ತನಿಖಾ ದಿನಾಂಕದಂತೆ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ ಇಡಲಾಗಿದೆ. 2018-19 ರ ಸಾಲಿನ ಅಂತ್ಯಕ್ಕೆ ಇದ್ದಂತೆ ಪ್ರತಿ ತಿಂಗಳು ಮತ್ತು ವರ್ಷದ ಅಂತ್ಯಕ್ಕೆ ಪ್ರಾರಂಭಿಕ ಶಿಲ್ಕು, ಸ್ವೀಕೃತಿ ಹಾಗೂ ಮರು ಪಾವತಿ ಕುರಿತು, ಘೋಷವಾರೆ ಹಾಕಿ ದೃಢೀಕರಿಸತಕ್ಕದ್ದು.

ಬ) ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿ ಮುದ್ದತ ಠೇವಣಿ ಹೂಡಿಕೆ ಮಾಡಿರುವ ಕುರಿತು:-

2018-19 ನೇ ಸಾಲಿನಲ್ಲಿ ರೂ.54,92,00,000/- ಮೊತ್ತವನ್ನು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮುದ್ದತ ಠೇವಣಿ ಮಾಡಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ:FD38TAR2018 DATED:27.08.2018 ಮತ್ತು ಸುತ್ತೋಲೆ ಸಂಖ್ಯೆ:DPE30ARU2010 DATED:19.06.2012 ರ ಪ್ರಕಾರ ರೂ.1 ಕೋಟಿ ಮೇಲ್ಪಟ್ಟ ಹೂಡಿಕೆಗಳನ್ನು ಕಡ್ಡಾಯವಾಗಿ ಇ-ಪ್ರೊಕ್ಯುರಮೆಂಟ್ ಮೂಲಕ ಅತಿ ಹೆಚ್ಚು ಬಡ್ಡಿ ದರ ನೀಡುವ ಬ್ಯಾಂಕಿನಲ್ಲಿ ಹೂಡಿಕೆ ಮಾಡಬೇಕಿರುತ್ತದೆ. ರೂ.1 ಕೋಟಿ ವರೆಗಿನ ಹೂಡಿಕೆಗಳನ್ನು ಆರ್ಹ ಬ್ಯಾಂಕ್‌ಗಳಿಂದ ಕೋಟೇಷನ್ ಕರೆದು ಹೆಚ್ಚು ಬಡ್ಡಿ ದರ ನೀಡುವ ಬ್ಯಾಂಕಿನಲ್ಲಿ ಹೂಡಿಕೆ ಮಾಡಬೇಕಿರುತ್ತದೆ ಹಾಗೂ ಹೂಡಿಕೆ ಮಾಡುವ ಮುನ್ನ ಹೂಡಿಕೆ ಸುರಕ್ಷತೆ ಮತ್ತು ಲಾಭದಾಯಕತೆ ದೃಷ್ಟಿಯಿಂದ ಸಂಬಂಧಿಸಿದ ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ಮೇಲ್ವಾಣಿಸಿದ ಸರ್ಕಾರದ ಮಾರ್ಗಸೂಚಿಯಂತೆ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ಕೈಗೊಳ್ಳಬೇಕಿರುತ್ತದೆ.

1) NETWORTH
2) CAPITAL ADEQUACY RATIO
3) PROFITABILITY TRACK RECORD
4) NPA
5) PREFERENCE AMONG EQUALS
6) TOATL OUTSATNDING INVESTMENT
7) INVESTMENT ON SINGLE DAY
8) BENEFIT OF BULK DEPOSIT

ಆದರೆ ಪ್ರಾಧಿಕಾರದಿಂದ ಹೂಡಲಾದ ಮುದ್ದತ್ ಠೇವಣಿಗಳನ್ನು ಮೇಲಿನ ಪ್ರಕ್ರಿಯೆ ಪಾಲಿಸಿ ಹೂಡಿಕೆ ಮಾಡಲಾಗಿರುವುದಿಲ್ಲ. ಈ ಕುರಿತಂತೆ ನೀಡಲಾದ ವಿಚಾರಣಾ ಪತ್ರ ಸಂಖ್ಯೆ-05/ದಿ.05-09-2019 ಕ್ಕೆ ಸದರಿ ಸರ್ಕಾರದ ಆದೇಶದ ಬಗ್ಗೆ ಮಾಹಿತಿ ಇರುವುದಿಲ್ಲ, ಇನ್ನುಮುಂದೆ ಸದರಿ ಆದೇಶದಂತೆ ಕ್ರಮ ಜರುಗಿಸಲಾಗುವುದು ಎಂದು ಪ್ರಾಧಿಕಾರದಿಂದ ಅನುಸರಣೆ ನೀಡಲಾಗಿದ್ದು ಆಕ್ಷೇಪಾರ್ಹ. ಕಾರಣ 2019-20 ನೇ ಸಾಲಿನಿಂದ ಕಡ್ಡಾಯವಾಗಿ ಸರ್ಕಾರದ ಆದೇಶಗಳ ಪ್ರಕಾರ ಹೂಡಿಕೆ ಮಾಡಲು ಸೂಚಿಸಲಾಗಿದೆ.

ಕ) ಮುದ್ದತ ಠೇವಣಿ ಮೊತ್ತದಲ್ಲಿ TDS ಕಡಿತಗೊಳಿಸಿರುವ ಕುರಿತು:

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮುದ್ದತ ಠೇವಣಿಗಳನ್ನು ರಾಷ್ಟ್ರೀಕೃತ ಬ್ಯಾಂಕಗಳಲ್ಲಿ ಹೂಡಿಕೆ ಮಾಡಿರುತ್ತಾರೆ. 2018-19 ನೇ ಸಾಲಿನಲ್ಲಿ ಹೂಡಿಕೆ ಮಾಡಿದ ಮುದ್ದತ ಠೇವಣಿಗಳಲ್ಲಿ ಶೇ.10 ರಷ್ಟು TDS ನ್ನು ಆಕರಿಸಿ, ಬಡ್ಡಿ ಮೊತ್ತದಲ್ಲಿ ರೂ.29,57,742/- ಗಳನ್ನು ಕಡಿತ ಮಾಡಿ ಉಳಿದ ಮೊತ್ತವನ್ನು ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ. ಕಡಿತಗೊಳಿಸಿದ TDS ಮೊತ್ತವನ್ನು ಮರುಜಮೆ ಪಡೆದಿರುವ ಕುರಿತು ನೀಡಲಾದ ವಿಚಾರಣಾ ಪತ್ರ ಸಂಖ್ಯೆ 15/ಟಿ.12-09-2019 , ಪ್ರಾಧಿಕಾರದಿಂದ ಮುಂದಿನ ಆರ್ಥಿಕ ವರ್ಷಗಳಲ್ಲಿ ಕಡಿತಗೊಳಿಸಿದ ಟಿ.ಡಿ.ಎಸ್. ಮೊತ್ತವನ್ನು ಮರುಪಡೆಯಲಾಗುವುದು ಎಂದು ಉತ್ತರಿಸಲಾಗಿದೆ. ಕಡಿತಗೊಳಿಸಿದ ಟಿ.ಡಿ.ಎಸ್. ಮೊತ್ತವನ್ನು ಮರುಪಡೆದ ದಾಖಲೆಗಳನ್ನು ಹಾಜರುಪಡಿಸುವವರೆಗೆ ಮುದ್ದತ ಠೇವಣಿ ಮೊತ್ತದಿಂದ ಆಕರಿಸಿದ ಬಡ್ಡಿ ಮೊತ್ತದಲ್ಲಿ TDS ಕಡಿತಗೊಳಿಸಿದ ರೂ.29,57,742/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

II) ಕಾರ್ಮಿಕ ಕಲ್ಯಾಣ ನಿಧಿ ಕುರಿತು :

ಆಸ್ತಿಕರ ವಸೂಲಾತಿಸುವಾಗ ಉಪಕರಗಳನ್ನು ಒಟ್ಟಾರೆ ಶೇ22% ರಂತೆ ವಸೂಲಾತಿ ತೋರಿಸಲಾಗಿದ್ದು, ಉಪಕರಗಳನ್ನು ಪಾವತಿಯಲ್ಲಿ ಬೇರೆ ಬೇರೆ ಆಗಿ ನಮೂದಿಸಿದಲ್ಲಿ ಮಾತ್ರ ಡಿ.ಸಿ.ಬಿ. ನಿರ್ವಹಿಸಬಹುದಾಗಿದೆ. ಕಾರಣ, ಪ್ರತ್ಯೇಕ ಉಪಕರಗಳನ್ನು ಪಾವತಿಯಲ್ಲಿ ತೋರಿಸಲು ಸೂಚಿಸಲಾಗಿದ್ದು, ಕರಗಳ ಬಾಕಿ ಬೇಡಿಕೆ ವಸೂಲಾತಿ ಹಾಗೂ ಕೊನೆಯ ಶಿಲ್ಕು ಹೊಂದಿರುವ ಪಾವತಿಯನ್ನು ಮುಂದಿನ ಲೆಕ್ಕ ತಪಾಸಣೆಗೆ ಹಾಜರಪಡಿಸಲು ಸೂಚಿಸಿದೆ.

2018-19 ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ನಿಧಿ ಭರಣಾ ಮಾಡಿದ ವಿವರ

ದಿನಾಂಕ	ಒಟ್ಟು ಮೊತ್ತ	ವಾರ್ಷಿಕ ಅಭಿವೃದ್ಧಿ ಶುಲ್ಕ	ನಿವ್ವಳ ಮೊತ್ತ	ಚೆಕ್ ನಂ	ಚೆಕ್ ದಿನಾಂಕ
10.04.2018	2,955.00	30.00	2,925.00	507607	10.04.2018
03.05.2018	41,337.00	413.00	40,924.00	507669	03.05.2018
10.05.2018	37,70,523.00	37,706.00	37,32,817.00	507682	10.05.2018
01.06.2018	34,487.00	345.00	34,142.00	507728	01.06.2018
03.07.2018	41,106.00	411.00	40,695.00	507786	03.07.2018
13.08.2018	13,571.00	0.00	13,571.00	507861	13.08.2018
11.09.2018	21,000.00	0.00	21,000.00	507932	11.09.2018
11.09.2018	20,475.00	0.00	20,475.00	507933	11.09.2018
20.12.2018	35,108.00	351.00	34,757.00	508151	20.12.2018
05.02.2019	14,90,816.00	14,907.00	14,75,909.00	508225	05.02.2019
11.03.2019	2,193.00	0.00	2,193.00	508316	11.03.2019
26.03.2019	7,83,758.00	7,837.00	7,75,921.00	508383	26.03.2019
ಒಟ್ಟು	62,57,329.00	62,000.00	6195,329.00		

12) ಕಾಮಗಾರಿ ಬಿಲ್ಲುಗಳಲ್ಲಿ ಶಾಸನಬದ್ಧ SGST AND CGST ರಾಜಧನ ಕಟಾವಣೆ ಹಾಗೂ ಟೆಂಡರ್ ಫಾರ್ಮ ಮಾರಾಟದಲ್ಲಿ ಸಂಗ್ರಹಿಸಿದ SGST AND CGST ಮೊತ್ತಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗಳಡಿ ಭರಣ ಮಾಡಿದ ಬಗ್ಗೆ.

ಸಂ 2018-19 ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಶಾಸನಬದ್ಧ SGST AND CGST ರಾಜಧನ ಕಟಾವಣೆ ಹಾಗೂ ಟೆಂಡರ್ ಫಾರ್ಮ ಮಾರಾಟದಲ್ಲಿ ಸಂಗ್ರಹಿಸಿದ SGST AND CGST ಮೊತ್ತಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗಳಡಿ ಭರಣಾ ಮಾಡಿದ್ದು ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಿವರ	1% SGST	1% CGST	ರಾಜಧನ	ಸರ್ಕಾರದ ಲೆಕ್ಕ ಶೀರ್ಷಿಕೆಗೆ ಭರಣ ಮಾಡಿದ್ದು
1	ಕಾಮಗಾರಿ ಬಿಲ್ಲುಗಳಲ್ಲಿ ಶಾಸನಬದ್ಧ ಕಟಾವಣೆಯಿಂದ ಸಂಗ್ರಹಿಸಿದ ಮೊತ್ತ	1,42,429.00	1,42,429.00	3,33,114.00	As per form GSTR-7. 0853-00-102-1-05-000
2	ಟೆಂಡರ ಫಾರ್ಮ ಮಾರಾಟದಲ್ಲಿ ಸಂಗ್ರಹಿಸಿದ ಮೊತ್ತ	1,244.00	1,244.00	00	As per GSTR-3B
	ಒಟ್ಟು ಮೊತ್ತ ರೂ.	1,43,673	1,43,673	3,33,114-00	

ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ CGST ಮೊತ್ತ.ರೂ.1,43,673.00 **ಹಾಗೂ SGST ರೂ.1,43,673.00** ಗಳನ್ನು E-payment ಮುಖಾಂತರ ಹಾಗೂ ರಾಜಧನ ವಸೂಲಿಸಿದ ಮೊತ್ತ ರೂ.**3,33,114.00ಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಚೆಕ್** ಮೂಲಕ ಭರಣ ಮಾಡಲಾಗಿದೆ. ಬಾಕಿ ಬೇಡಿಕೆ ವಸೂಲಾತಿ ಹಾಗೂ **ಕೊನೆಯ ಶಿಲ್ಕು ಹೊಂದಿರುವ ಡಿಸಿಬಿಯನ್ನು** ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

13) ಆಸ್ತಿಕರ ವಸೂಲಿ :-

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ ಒಟ್ಟು ವಿನ್ಯಾಸಗಳಲ್ಲಿ ಕೆಲವು ವಿನ್ಯಾಸಗಳನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಹಸ್ತಾಂತರಿಸಲಾಗಿದೆ. ಉಳಿದ ವಿನ್ಯಾಸಗಳನ್ನು ಪ್ರಾಧಿಕಾರದಿಂದಲೇ ನಿರ್ವಹಣೆ ಮಾಡಲಾಗುತ್ತದೆ. ಇದಕ್ಕೆ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಸಭೆಯಲ್ಲಿ ವಿಧಿಸುವಂತೆ ಕಟ್ಟಡ ಹಾಗೂ ಖುಲ್ಲಾ ಜಾಗೆಗೆ ಸಂಬಂಧಿಸಿದಂತೆ ಆಸ್ತಿಕರವನ್ನು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಸಂಬಂಧಿಸಿದ ನಿವೇಶನದಾರರಿಂದ ವಸೂಲಿ ಮಾಡಲು ಕ್ರಮ ಕೈಕೊಳ್ಳಬೇಕಾಗಿರುತ್ತದೆ. ಆದರೆ ಪ್ರಾಧಿಕಾರದಲ್ಲಿ ಯಾವುದೇ ಆಸ್ತಿ ರಜಿಸ್ಟರ ನಿರ್ವಹಿಸಿರುವುದಿಲ್ಲ. ಇದರ ಬಗ್ಗೆ ಈ ಹಿಂದಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದರೂ ಯಾವುದೇ ಕ್ರಮ ಜರುಗಿಸದೆ ಇರುವದು ಹುಂಬ ವಿಷಾದನೀಯ. ಕಾರಣ, ತಿಂಗಳ ಬೇಡಿಕೆ, ವಸೂಲಿ ಹಾಗೂ ಬಾಕಿ ಬಗ್ಗೆ ಯಾವುದೇ ಮಾಹಿತಿಯು ಸುಲಭವಾಗಿ ಲಭ್ಯವಿರುವದಿಲ್ಲ.2018-19 ನೇ ಸಾಲಿನಲ್ಲಿ ಈ ಕೆಳಗಿನಂತೆ ವಿವರಣೆ ನೀಡಿದ್ದು ನಿಖರ ಮಾಹಿತಿಗಾಗಿ ಡಿ.ಸಿ.ಬಿ. ರಜಿಸ್ಟರ ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ.

ವಸೂಲಾತಿಸಿರುವ ತಿಂಗಳಲ್ಲಿ ಉಪಕರಣಗಳ ಮೊತ್ತ ಸರ್ಕಾರಕ್ಕೆ ಭರಣಾ ಮಾಡಬೇಕಾಗಿದ್ದು, ಆರೋಗ್ಯಕರ ಶೇ 15% ಗ್ರಂಥಾಲಯ ಕರ ಶೇ 6% ಹಾಗೂ ಬಿಕ್ಷುಕ ಕರ ಶೇ 3% ಮತ್ತು ಸ್ಟಂ ಸೆಸ್ (ಕೊಳಚೆ ನಿರ್ಮೂಲನಾ ಕರ) ಗಳನ್ನು ಆಡಳಿತ ವೆಚ್ಚ ಶೇ10% ರಂತೆ ಹಾಗೂ ಶೇ3% ರಂತೆ ಪ್ರಾಧಿಕಾರಕ್ಕೆ ಉಳಿಸಿಕೊಂಡು ಉಳಿದ ಮೊತ್ತವನ್ನು ಸರ್ಕಾರದ ಆಯಾ ನಿಧಿಗೆ ಭರಣಾ ಮಾಡಬೇಕಾಗಿದ್ದು ವಿವರ ಇಂತಿದೆ.

ಕ್ರಮ ಸಂಖ್ಯೆ	ವಿವರಣೆ	2018-19 ರಲ್ಲಿ ವಸೂಲಿ	ಶೇಕಡಾ	ಆಡಳಿತ ವೆಚ್ಚ	ಸರಕಾರಕ್ಕೆ ಭರಣಾ ಮಾಡ ಬೇಕಾಗಿದ್ದು	ಸರಕಾರಕ್ಕೆ ಭರಣಾ ಮಾಡಿದ್ದು	ಬಾಕಿ ಬಾಬತ್ತು
1	ಆರೋಗ್ಯ ಕರ ಶೇ 15%	60,610.00	10%	6,061.00	54,549.00	–	54,549.00
2	ಗ್ರಂಥಾಲಯ ಕರ ಶೇ.6%	24,256.00	10%	2,426.00	21,830.00	21,830.00	ಇಲ್ಲ
3	ಭಿಕ್ಷುಕರ ಕರ ಶೇ. 3%	12,075.00	10%	1,208.00	10,867.00	10,867.00	ಇಲ್ಲ
4	ಕೊಳಚೆ ನಿರ್ಮೂಲನ ಕರ	52,161.00	30%	15,648.00	36,513.00	36,513.00	ಇಲ್ಲ
	ಒಟ್ಟು	1,49,102.00		25,343.00	1,23,759.00	69,210.00	54,549.00

ಸಂಬಂಧಿಸಿದ ಇಲಾಖೆಯಗೆ ಭರಣಾ ಮಾಡುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

2018-19 ನೇ ಸಾಲಿನಿಂದ ಉಪಕರಗಳ ಸಂಗಡ ಹೊಸದಾಗಿ ಸರ್ಕಾರದ ಆದೇಶ ಸಂಖ್ಯೆ ವ್ಯಕಾ.ಇ./20/ಕಾ.ಸ.ನ/2012-13 ದಿ:30/08/2013 ರಂತೆ ಸಾರಿಗೆ ಸೆಸ್ ಶೇ 2% ರಂತೆ ವಸೂಲಾತಿಸಲು ಆದೇಶಿಸಿದಂತೆ ಆಸ್ತಿಕರದೊಂದಿಗೆ ವಸೂಲಾತಿಸಲು ಸೂಚಿಸಿದೆ.

14) ಮೇಲ್ವಿಚಾರಣೆ ಶುಲ್ಕ ಮತ್ತು ಬೆಟರಮೆಂಟ್ ಲೆವಿ ಭರಿಸಿಕೊಳ್ಳುವ ಕುರಿತು :-

2018-19 ನೇ ಸಾಲಿನಲ್ಲಿ ಪ್ರಾಧಿಕಾರ ಖಾಸಗಿ ನಿವೇಶನಗಳ ಲೇಔಟ್ (Layout) ಹಾಗೂ ಏಕ ನಿವೇಶನ ಲೇಔಟ್ ಅನುಮೋದಿಸಿದ್ದು, ಈ ಕೆಳಕಂಡ ಮೊತ್ತವನ್ನು ಸ್ವೀಕೃತಗೊಂಡಿದೆ. (Receipt & Payment ತಟ್ಟೆ ಪ್ರಕಾರ)

1) Bettermant Levy – Rs.24,90,418.00/-
2) Supervision charges - Rs.1,17,93,143.00/-
   on Pvt. Layout

ಒಟ್ಟು – Rs. 1,42,83,561.00/-

Karnataka Country and Town Planning Act-1961 ರ ಸೆಕ್ಷನ್ 18 ರನ್ವಯ ಖಾಸಗಿ ಭೂ ಅಭಿವೃದ್ಧಿಕಾರಿಂದ ವಸತಿ ಉದ್ದೇಶಕ್ಕಾಗಿ ನಿರ್ಮಿಸಿರುವ ಬಡಾವಣೆಗಳಿಗೆ ನೊಂದಣಿ ಅಧಿಕಾರಿಗಳ ಮಾರ್ಗಸೂಚಿ ದರದಂತೆ ಲಾಭಾಂಶದಲ್ಲಿ ಬರುವ 1/3 ಭಾಗವನ್ನು ಉತ್ತಮತೆಯ ಶುಲ್ಕವನ್ನಾಗಿ ವಸೂಲಿ ಮಾಡಿ ಪ್ರಾಧಿಕಾರದ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2018-19ನೇ ಸಾಲಿನಲ್ಲಿ ಲೇಔಟ್ ಮಂಜೂರಾತಿಯನ್ನು ನೀಡುವ ಸಂದರ್ಭದಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಪ್ರಕರಣ 18 ರಂತೆ ಉಪನೊಂದಾಣಾಧಿಕಾರಿಗಳು ನಿರ್ಧರಿಸಿದ ಮಾರುಕಟ್ಟೆ ಮೌಲ್ಯದೊಂದಿಗೆ ಭೂಪರಿವರ್ತನೆಗೆ ಮುಂಚೆ ಭೂಮಿಯನ್ನು ಕೊಂಡ ಮೌಲ್ಯ ಮತ್ತು ಲೇಔಟ ಅಭಿವೃದ್ಧಿಯ ವೆಚ್ಚ ಸೇರಿದಂತೆ 1/3 ರಷ್ಟು ಅಬಿವೃದ್ಧಿ ಶುಲ್ಕವನ್ನು ವಸೂಲಿಸಬೇಕಾಗಿತ್ತು. ಆದರೆ ಆ ರೀತಿಯ ಕ್ರಮ ಅನುಸರಿಸದೆ ಉತ್ತಮತೆಯ ಶುಲ್ಕ 1)ವಸತಿ-ರೂ.4.00/- per Sq.mtr. 2)ಕೈಗಾರಿಕಾ-ರೂ.8.00/- per Sq.mtr. 3)ವಾಣಿಜ್ಯ-ರೂ.12.00/- per Sq.mtr. ಈ ರೀತಿ ಲೆಕ್ಕ ಹಾಕಿ ವಸೂಲಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಪ್ರಾಧಿಕಾರದಿಂದ 17 ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಲ್ಲಿ ಏಳು ನಿವೇಶನ ಲೇಔಟ್‌ಗಳನ್ನು ಉತ್ತಮತೆ ಶುಲ್ಕ ಲೆಕ್ಕಾಚಾರಕ್ಕೆ ಉದಾಹರಣೆಯಾಗಿ ಪರಿಗಣಿಸಿ, ಉತ್ತಮತೆ ಶುಲ್ಕ ಲೆಕ್ಕಾಚಾರಕ್ಕೆ ಪ್ರತಿ ಚ.ಮೀ.ಗಳಿಗೆ ಕನಿಷ್ಠ ಮಾರುಕಟ್ಟೆ ದರಗಳನ್ನು ಪರಿಗಣಿಸಿದ್ದು, ಈ 7 ಪ್ರಕರಣಗಳಲ್ಲಿ ಪ್ರಾಧಿಕಾರಕ್ಕೆ ಉಂಟಾದ ನಷ್ಟದ ಮೊತ್ತ ರೂ.3,76,40,163/- ಗಳಾಗಿದ್ದು, ಈ ಮೊತ್ತವನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ. ಈ ನಷ್ಟಕ್ಕೆ ಬಡಾವಣೆ ಅನುಮೋದನೆ ನೀಡಿದವರೇ ನೇರ ಹೊಣೆಗಾರರಾಗಿರುತ್ತಾರೆ. ಕಾರಣ ಪ್ರಾಧಿಕಾರವು ಈ ಬಗ್ಗೆ ಪರಿಶೀಲಿಸಿ, ಉತ್ತಮತೆ ಶುಲ್ಕವನ್ನು ನಿಖರವಾಗಿ ಲೆಕ್ಕ ಹಾಕಿ ವಸೂಲಿಸಿ ಆರ್ಥಿಕ ಸದೃಢತೆಯನ್ನು ಹೊಂದುವುದು ಅತ್ಯಗತ್ಯ ಎಂದು ಅಭಿಪ್ರಾಯಿಸಿದೆ. ಹದಿನೇಳು ಪ್ರಕರಣಗಳ ವಿವರಗಳನ್ನು ಅನುಬಂಧ 5 ರಲ್ಲಿ ವಿವರಿಸಿದೆ. ಖಾಸಗಿ ವಿನ್ಯಾಸದಾರರಿಂದ, ಸಂಘ ಸಂಸ್ಥೆಗಳಿಂದ ಬೆಟರಮೆಂಟ ಲೇವಿ ಹಾಗೂ ಮೇಲ್ವಿಚಾರಣ ಶುಲ್ಕವನ್ನು ಪ್ರಾಧಿಕಾರಕ್ಕೆ ಪಡೆದ ಮೊತ್ತದ ವಿವರವನ್ನು ಅನುಬಂಧ 5 ಎ ರಲ್ಲಿ ನೀಡಲಾಗಿದೆ.

15) ಭೈರಿದೇವರಕೊಪ್ಪ ವಸತಿ ವಿನ್ಯಾಸ ಹಂಚಿಕೆ ಬಗ್ಗೆ. :-

ಭೈರಿದೇವರ ಕೊಪ್ಪ ವಸತಿ ವಿನ್ಯಾಸ ವಿಸ್ತೀರ್ಣ ಹಂಚಿಕೆ ಮಾಡಿದ ವಿವರ ಈ ಕೆಳಗಿನಂತಿದೆ.

ಕ್ರಸಂ.	ರಚಿಸಲ್ಪಟ್ಟ ನಿವೇಶನಗಳು	ಒಟ್ಟು ಸಂಖ್ಯೆ 536	ಷರಾ
1	ವಿಮಾನ ನಿಲ್ದಾಣ ಉನ್ನತೀಕರಣದಲ್ಲಿ ಭೂಮಿ ಕಳೆದುಕೊಂಡವರಿಗೆ ಕಾಯ್ದಿರಿಸಿದ್ದು Govt Order Date: 10/10/2008)	–	ಈಗಾಗಲೇ ನಿವೇಶನ ಹಂಚಿಕೆ ಮಾಡಲಾಗಿದೆ. ಹಾಗೂ ನಿವೇಶನ ಹಂಚಿಕೆ ಮಾಡುವುದು ಬಾಕಿ ಇರುವುದಿಲ್ಲ.
2	ವಿಮಾನ ನಿಲ್ದಾಣ ಉನ್ನತೀಕರಣದಲ್ಲಿ ಭೂಮಿ ಕಳೆದುಕೊಂಡವರಿಗೆಕಾಯ್ದಿರಿಸಿದ್ದು (Resolution Date:20/05/2011& 20/06/2011)	–	ದಿನಾಂಕ:08.01.2016ರಂದು 70 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.ಪೈಕಿ 15 ನಿವೇಶನಗಳು ನೋಂದಂಇಯಾಗಿರುತ್ತವೆ.55 ಬಾಕಿ ಉಳಿದಿರುತ್ತವೆ.
3	ನಿವೇಶನ ಸಾರ್ವಜನಿಕವಾಗಿ ವಿತರಣೆ (Resolution Date:25/11/2011 & 20/06/2011)	–	ಒಟ್ಟು 104 ನಿವೇಶನಗಳನ್ನು ವಿತರಿಸಲಾಗಿದೆ.
4	ನಿವೇಶನ ಕಾಯ್ದಿರಿಸಿದ ಕುರಿತು (Resolution Date:18/02/2012)	–	ಉಚ್ಚ ನ್ಯಾಯಾಲಯದ ಆದೇಶದಂತೆ 8 ನಿವೇಶನಗಳು ಹಂಚಿಕೆ ಮಾಡಲಾಗಿದೆ.
5	ಭೂಮಿಯನ್ನು ಅಧ್ಯರ್ಪಿಸಿದವರಿಗೆ ನಿವೇಶನ ಕಾಯ್ದಿರಿಸಿದ ಕುರಿತು (As per the Allotment Rules 1991)	17	ಸನ್2018-19 ನೇ ಸಾಲಿನಲ್ಲಿ ಯಾವುದೇ ನಿವೇಶನ ಹಂಚಿಕೆ ಮಾಡಿರುವುದಿಲ್ಲಾ.
6	(Site under litigation R.S. No 317-318)	154	ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಹಂಚಿಕೆ ಮಾಡಿಲ್ಲ.
7	ಮೂಲೆ ನಿವೇಶನಗಳು	86	ಹರಾಜು ಮಾಡಿರುವದಿಲ್ಲ
	ಒಟ್ಟು	257	

16) ಮೂಲೆ ನಿವೇಶನಗಳ ಕುರಿತು :

ಅ) ಪ್ರಾಧಿಕಾರದ ವಿನ್ಯಾಸಗಳಲ್ಲಿ ಲಭ್ಯವಿದ್ದ ವಿವಿಧ ನಿವೇಶನಗಳ ಮಾಹಿತಿ :-

ಪ್ರಾಧಿಕಾರದಿಂದ ರಚಿಸಲಾದ ವಿವಿಧ ವಿನ್ಯಾಸಗಳಲ್ಲಿ ವರದಿಯ ಅವಧಿಯ ಅಂತ್ಯಕ್ಕೆ ಬಾಕಿ ಉಳಿದ ಸಾಮಾನ್ಯ ನಿವೇಶನ ಹಾಗೂ ಮೂಲೆ ನಿವೇಶನಗಳ ಮಾಹಿತಿಯನ್ನು ವರದಿಗೆ ಲಗತ್ತಿಸಿದ ಅನುಬಂಧ-6 ರಲ್ಲಿ ತೋರಿಸಲಾಗಿದೆ. ಸದರಿ ಮಾಹಿತಿ ಪರಿಶೀಲಿಸಲಾಗಿ, ಸಾಕಷ್ಟು ಸಾಮಾನ್ಯ ನಿವೇಶನಗಳು ಹಾಗೂ ಮಾಲ್ಕಿ ನಿವೇಶನಗಳು ವಿಲೇವಾರಿಯಾಗದೇ ಬಾಕಿ ಉಳಿದಿವೆ ಹಾಗೂ ವರದಿಯ ಅವಧಿಯಲ್ಲಿ ವಿವಿಧ ವಿನ್ಯಾಸಗಳಿಂದ ಹಣ ಮರಳಿ ಪಡೆದ ಪ್ರಕರಣಗಳು ಸಹ ಇದ್ದು, ವಿನ್ಯಾಸಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದದೇ ಇದ್ದರೂ ಅರ್ಜಿಗಳನ್ನು ಕರೆಯುವುದರಿಂದ ಈ ರೀತಿ ಆಗಿರಬಹುದಾಗಿದೆ.

ವಿನ್ಯಾಸಗಳಲ್ಲಿ ಭಾಗಶಃವಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳು ಪ್ರಾಧಿಕಾರಕ್ಕೆ ಹೆಚ್ಚುವರಿ ಹೊರೆಯಾಗಿ ವೆಚ್ಚಗಳು ಹೆಚ್ಚಾಗುವ ಸಂಭವ ಉಂಟಾಗುತ್ತದೆ. ವಿವಿಧ ವಿನ್ಯಾಸಗಳಲ್ಲಿ ಲಭ್ಯವಿರುವ ನಿವೇಶನಗಳ ವಿವರಗಳನ್ನು ನಿಗದಿತ ನಮೂನೆಯ ರಜಿಸ್ಟರನಲ್ಲಿ ಬರೆಯಲು ಸೂಚಿಸಿದೆ. ರಜಿಸ್ಟರನಲ್ಲಿ ನಮೂದಿಸಿದೇ ಇರುವುದರಿಂದ ಪ್ರಾಧಿಕಾರ ಒದಗಿಸಿದ ಕಟ್ಟೆಯಲ್ಲಿನ ಮಾಹಿತಿಗಳು ಸರಿಯಾದ ಅಂಕಿ ಅಂಶಗಳೆ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲಾ. ಈ ಬಗ್ಗೆ ಹಿಂದಿನ ವರದಿಗಳಲ್ಲಿ ಸಾಕಷ್ಟು ಬಾರಿ ಸೂಚಿಸುತ್ತಾ ಬಂದಿದ್ದರೂ ಸಹ ವಹಿಯನ್ನು ನಿರ್ವಹಿಸದೇ ಇರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಲಾಗಿದೆ.

ಪ್ರಾಧಿಕಾರ ಹಾಜರುಪಡಿಸಿದ ಮಾಹಿತಿಯ ಪ್ರಕಾರ 2018-19 ನೇ ಸಾಲಿನ ಅಂತ್ಯಕ್ಕೆ ಬಾಕಿ ಉಳಿದ ನಿವೇಶನದ ವಿವರಗಳ ಈ ಕೆಳಗಿನಂತಿವೆ.

ಸಾಮಾನ್ಯ ನಿವೇಶನಗಳು ಸಂಖ್ಯೆ:	898 ಹಂಚಿಕೆಯಾಗಬೇಕಾಗಿದೆ.
ಮೂಲೆ ನಿವೇಶನಗಳು ಸಂಖ್ಯೆ:	1370 ಹರಾಜು ಮಾಡಬೇಕಾಗಿದೆ
ಬಿಡಿ ನಿವೇಶನಗಳು ಸಂಖ್ಯೆ	:1221 (25% ವಿತರಣೆ, 75% ಹರಾಜು)
ಒಟ್ಟು	:3489

2018-19 ನೆ ಸಾಲಿನಲ್ಲಿ ಮೂಲೆ ನಿವೇಶಗಳು: (-) 37 ಹಂಚಿಕೆ ಮಾಡಿದ್ದು ಇರುತ್ತದೆ.

ಒಟ್ಟು : 3489

ಈ ರೀತಿ ನಿವೇಶನಗಳು ಹಂಚದೇ ಬಾಕಿ ಉಳಿದಿರುವುದಕ್ಕೆ ವಿವರಣೆ ನೀಡುವುದು ಹಾಗೂ ಹಂಚಿಕೆಗಾಗಿ ನಿಯಮಾವಳಿ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

37 ಮೂಲ ನಿವೇಶನಗಳು ಹಂಚಿಕೆ ಮಾಡಿದ ನಿವೇಶನಗಳಿಂದ ಬಂದ ಆದಾಯ ವಿವರ-

ಅ.ಸಂ	ಗ್ರಾಮ	ಪ್ಲಾಟ ನಂ	ನಿವೇಶನ ಮೊತ್ತ
1	ರಾಯನಾಳ	89	15,21,000.00
2	ರಾಯನಾಳ	926	8,47,000.00
3	ಅಯೋಧ್ಯಾ	126	16,82,000.00
4	ರಾಯನಾಳ	615	8,11,000.00
5	ರಾಯನಾಳ	953	9,49,000.00
6	ರಾಯನಾಳ	1011	4,84,000.00
7	ರಾಯನಾಳ	984	4,68,000.00
8	ಸತ್ತೂರ	1622	18,09,000.00
9	ರಾಯನಾಳ	639	10,81,000.00
10	ಸತ್ತೂರ	366	10,35,000.00
11	ರಾಯನಾಳ	596	10,51,000.00
12	ರಾಯನಾಳ	606	7,13,000.00
13	ರಾಯನಾಳ	663	6,99,000.00
14	ಸತ್ತೂರ	1801	15,60,000.00
15	ಸತ್ತೂರ	1382	18,37,000.00
16	ರಾಯನಾಳ	1057	6,64,000.00
17	ರಾಯನಾಳ	1026	7,67,000.00
18	ರಾಯನಾಳ	1056	7,92,000.00
19	ರಾಯನಾಳ	198	7,30,000.00
20	ರಾಯನಾಳ	212	6,65,000.00
21	ರಾಯನಾಳ	197	14,08,000.00
22	ರಾಯನಾಳ	940	13,21,000.00
23	ರಾಯನಾಳ	939	13,02,000.00
24	ಸತ್ತೂರ	1261	6,40,000.00
25	ರಾಯನಾಳ	170	12,36,000.00
26	ಸತ್ತೂರ	1344	18,51,000.00
27	ರಾಯನಾಳ	260	13,62,000.00
28	ರಾಯನಾಳ	229	11,25,000.00
29	ರಾಯನಾಳ	597	9,75,000.00
30	ರಾಯನಾಳ	497	7,63,000.00
31	ರಾಯನಾಳ	968	5,63,000.00
32	ರಾಯನಾಳ	308	6,38,000.00
33	ರಾಯನಾಳ	545	8,25,000.00
34	ರಾಯನಾಳ	544	10,40,000.00
35	ಸತ್ತೂರ	1669	25,78,000.00
36	ಸತ್ತೂರ	1670	37,97,000.00
37	ರಾಯನಾಳ	605	9,41,000.00
		ಒಟ್ಟು ಮೊತ್ತ ರೂ.	4,25,30,000.00

ಬ) **ವಿವಿಧ ವಿನ್ಯಾಸಗಳ ಮೂಲ ಹಾಗೂ ಬಿಡಿ ನಿವೇಶನಗಳ ಕುರಿತು ಮೌಲ್ಯದ ಬೇಡಿಕೆ ವಸೂಲಿ ಹಾಗೂ ಬಾಕಿ ವಿವರ :-**

ವಿವಿಧ ವಿನ್ಯಾಸಗಳ ಮೂಲ ಹಾಗೂ ಬಿಡಿ ನಿವೇಶನಗಳ ಕುರಿತು ಮೌಲ್ಯದ ಬೇಡಿಕೆ ವಸೂಲಿ ಹಾಗೂ ಬಾಕಿ ಪ್ರಾಧಿಕಾರದ ಕಚೇರಿಯಲ್ಲಿ ಮೂಲ ಹಾಗೂ ಬಿಡಿ ನಿವೇಶನಗಳ ಪ್ರತಿಯೊಂದು ವಸತಿ ವಿನ್ಯಾಸದ ನಿವೇಶನಗಳ ಮೌಲ್ಯದ ಬೇಡಿಕೆ, ವಸೂಲಿ ಹಾಗೂ ಬಾಕಿಗಳ ರಜಿಸ್ಟರ ನಿರ್ವಹಿಸಿರುವದಿಲ್ಲ. ಒಟ್ಟು 2626 ನಿವೇಶನಗಳ ಪೈಕಿ ಕೇವಲ 38 ನಿವೇಶಗಳು ಮಾತ್ರ ಹರಾಜ ಆಗಿರುತ್ತವೆ. ಲೆಕ್ಕ ತಪಾಸಣಾ ಅವಧಿಯಲ್ಲಿ ಪ್ರಾಧಿಕಾರದಲ್ಲಿ ಕರ್ನಾಟಕ ಸರ್ಕಾರ ಆದೇಶ ದಿ:13-07-2016 ರಂತೆ ಮೂಲ ನಿವೇಶನಗಳನ್ನು ಈ ಹರಾಜು ಮಾಡು ಆದೇಶಿಸಲಾಗಿದ್ದು ಆದ್ದರಿಂದ ಮುಂದೆ ಈ ಹರಾಜು ಮಾಡುವಾಗ ಸರಿಯಾಗಿ ಸಾರ್ವಜನಿಕರಿಗೆ ಮಾಹಿತಿ ನೀಡಿ ಈ ಹರಾಜು ಮಾಡಲು ಕ್ರಮ ತಗೆದುಕೊಳ್ಳುವದು. ಸದರಿ ಸಾಲಿನಲ್ಲಿನ ಬೇಡಿಕೆ ವಸೂಲಿ ಮಾಹಿತಿ ಈ ಕೆಳಗಿನಂತಿದೆ.

ಕ್ರ.ಸಂಖ್ಯೆ	ವಿವರ	ಮೊತ್ತ
1	ಹಿಂದಿನ ಸಾಲಿನ ಬಾಕಿ	–
2	ಚಾಲ್ತಿ ಸಾಲಿನ ಬೇಡಿಕೆ	4,72,81,000.00
3	ಒಟ್ಟು ಮೊತ್ತ	4,72,81,000.00
4	ವಸೂಲಿ	4,72,81,000.00
5	ಬಾಕಿ	–

ಕ) ಮೂಲೆ ನಿವೇಶನ ಹಂಚಿಕೆಯಲ್ಲಿ ವಿಳಂಬವಾಗಿ ಪಾವತಿಸಿದ ಮೊತ್ತಕ್ಕೆ ದಂಡ ಆಕರಣೆ ಕುರಿತು:

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ 2018-19 ನೇ ಸಾಲಿನಲ್ಲಿ ದಿನಾಂಕ:09.07.2018 ರಿಂದ 25.07.2018 ರ ವರೆಗೆ ನಡೆದ "ಇ" ಹರಾಜಿನ ಮೂಲಕ ಮೂಲೆ ನಿವೇಶನಗಳ ಹಂಚಿಕೆ ಮಾಡಿದ ಮತ್ತು ಪ್ರಾಧಿಕಾರದ ವಿಭಗದಿಂದ ಒಟ್ಟು 35 ಮೂಲೆ ನಿವೇಶನಗಳ ಲೆಕ್ಕಪತ್ರ ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುತ್ತಾರೆ.ಕಡತಗಳ ಲೆಕ್ಕಪರಿಶೋಧನೆ ಮತ್ತು ತಪಾಸಣೆಯಲ್ಲಿ ಗಮನಿಸಿದಾಗ ಅಯೋಧ್ಯಾ ಪ್ಲಾಟ ನಂಬರ:126,ಸತ್ತೂರ ಪ್ಲಾಟ ನಂ:366,1344 ಮತ್ತು ರಾಯನಾಳ ಪ್ಲಾಟ ನಂ:596,198,212,197,939 ಮತ್ತು ಪ್ಲಾಟ ನಂ:308 ಹಂಚಿಕೆದಾರರಿಂದ ಉಳಿದ ಶೇ.75 ಮೊತ್ತ, ವಿಳಂಬವಾಗಿ ಪಾವತಿ ಮಾಡಿಕೊಂಡಿರುತ್ತಾರೆ.ವಿಳಂಬವಾಗಿ ಪಾವತಿಸಿದ ಮೊತ್ತಕ್ಕೆ ಪ್ರಾಧಿಕಾರದಿಂದ ಶೇ.18 ಬಾಕಿ ಮೊತ್ತಕ್ಕೆ ದಂಡ ಆಕರಣೆ ಮಾಡಿರುವುದಿಲ್ಲಾ.ಇದರಿಂದ ಒಟ್ಟು ಮೊತ್ತ ರೂ.37,263.00 ಆದಾಯ ಪ್ರಾಧಿಕಾರಕ್ಕೆ ಸಂದಾಯವಾಗಿರುವುದಿಲ್ಲಾ.ವಿಚಾರಣಾ ಪತ್ರ ಸಂಖ್ಯೆ:12.09.2019 ಮೂಲಕ ಸೂಕ್ತ ವಿವರಣೆ ಕೇಳಲಾಗಿದ್ದು ಪ್ರಾಧಿಕಾರದಿಂದ ಸೂಕ್ತ ಮತ್ತು ಸರಿಯಾದ ವಿವರಣೆ ನೀಡಿರುವುದಿಲ್ಲ. ಆದ ಕಾರಣ ರೂಪಾಯಿ 37,263.00 ಗಳನ್ನು ವಸೂಲಾತಿಯಲ್ಲಿಡಲಾಗಿದೆ.

ಮುಂದುವರೆದು ಸತ್ತೂರ ಪ್ಲಾಟ ನಂಬರ 1622:ಶ್ರೀಮತಿ. ಸುವಿನಾ.ಎನ್.ಬ್ಯಾಹಟ್ಟಿ ಇವರಿಗೆ ಹಂಚಿಕೆ ಮಾಡಿದ ಮೂಲೆ ನಿವೇಶನ ಕಡತ ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲಾ.

ರೂ.ಶೇ.75 ಮೊತ್ತ ವಿಳಂಬವಾಗಿ ಪಾವತಿ ಮಾಡಿದ ಹಂಚಿಕೆದಾರರ ವಿವರ ಈ ಕೆಳಗಿನಂತಿದೆ.

ಅ.ನಂ.	ಗ್ರಾಮ	ಪ್ಲಾಟ ನಂಬರ	ನಿವೇಶನ ಮೊತ್ತ	ಶೇ.75	ವಿಳಂಬವಾದ ಅವಧಿ ದಿನಗಳಲ್ಲಿ	ವಿಳಂಬಕ್ಕೆ ದಂಡ ಮೊತ್ತ
1	ಅಯೋಧ್ಯಾ	126	16,82,000.00	12,61,500.00	2	1,244.00
2	ಸತ್ತೂರ	366	10,35,000.00	7,76,250.00	34	13,015.00
3	ಸತ್ತೂರ	1344	18,51,000.00	13,88,250.00	6	4,108.00
4	ರಾಯನಾಳ	596	10,51,000.00	7,88,250.00	9	3499.00
5.	ರಾಯನಾಳ	198	7,30,000.00	5,47,500.00	6	1620.00
6	ರಾಯನಾಳ	212	6,65,000.00	5,01,250.00	8	1976.00
7	ರಾಯನಾಳ	197	14,08,000.00	10,56,500.00	9	7,338.00
8	ರಾಯನಾಳ	939	13,02,000.00	9,76,5000.00	9	4,338.00
9	ರಾಯನಾಳ	308	6,38,000.00	4,78,500.00	25	5,900.00
					ಒಟ್ಟು	37,263.00

17) ಪ್ರಾಧಿಕಾರದಿಂದ ರಚಿಸಲ್ಪಟ್ಟ ವಿನ್ಯಾಸಗಳ ಕ.ಜ.ಪ ತಯಾರಿಸುವ ಕುರಿತು :-

ಪ್ರಾಧಿಕಾರದಲ್ಲಿ ಈ ವರೆಗೂ ರಚಿಸಲ್ಪಟ್ಟ ವಿನ್ಯಾಸಗಳ ಕೆ.ಜಿ.ಪಿ. ತಯಾರಿಸಿರುವುದಿಲ್ಲ. ರಚಿಸಲ್ಪಟ್ಟ ವಿನ್ಯಾಸಗಳ ವಿವರ ಕೆಳಗಿನಂತೆ ಇರುತ್ತದೆ.

ಇಲ್ಲಿಯವರೆಗೂ ರಚಿಸಲ್ಪಟ್ಟ ವಿನ್ಯಾಸಗಳ ಸಂಖ್ಯೆ : **19**
ಕ.ಜ.ಪ. ಅನುಮೋದನೆಗೊಂಡ ವಿನ್ಯಾಸಗಳ ಸಂಖ್ಯೆ : **07**
ಕ.ಜ.ಪ. ಅನುಮೋದನೆ ಆಗದೆ ಇರುವ ವಿನ್ಯಾಸಗಳ ಸಂಖ್ಯೆ : **12**

-: ಕ.ಜ.ಪ. ಅನುಮೋದನೆಗೊಳ್ಳದೇ ಇರುವ ವಿವರ :-

ಅ.ನಂ.	ಗ್ರಾಮ	ಸ.ನಂ.	ವಿಗು.ಅ.	ಷರಾ
1	ಉಣಕಲ್	603/1+2	7.34	ಹು.ಧಾ. ನ.ಪ್ರಾ./517/09-10 ದಿ: 26-05-2009 ರಂದು ಹುಬ್ಬಳ್ಳಿ ತಹಶೀಲ್ದಾರ ಕಚೇರಿಗೆ ಕ.ಜ.ಪ. ಅನುಮೋದನೆಗಾಗಿ ಕಳುಹಿಸಲಾಗಿದೆ.
2	ಅಯೋದ್ಯಾ	157/16	3.01	ಸದರ
3	ಕೃಷ್ಣಾಪೂರ	18/3	1.31	ಅಳತೆ ಕೆಲಸ ಪೂರ್ತಿಸಿದ್ದು ದಾಖಲೆಗಳನ್ನು ತಯಾರಿಸಬೇಕಾಗಿದೆ.
4	ಅತ್ತಿಕೊಳ್ಳ	45/1	4.06	ಸದರ
5	ಸುತಗಟ್ಟಿ	116/2	6	ಅಳತೆ ಕೆಲಸ ಪೂರ್ತಿಸಿದ್ದು ಯೋಜನಾ ವಿಭಾಗಕ್ಕೆ ನಕ್ಷೆ ಅನುಮೋದನೆಗಾಗಿ ಕಳುಹಿಸಲಾಗಿದೆ.
6	ರಾಯನಾಳ	113/ಎ+ಬಿ	12	ಸದರ
7	ರಾಯನಾಳ	88.1ನೇ ಹಂತ	141.10	ತಹಶೀಲ್ದಾರ ಹುಬ್ಬಳ್ಳಿ ಇವರಿಗೆ ಕ.ಜ.ಪ. ಅನುಮೋದನೆಗಾಗಿ ಪತ್ರ ಸಂಖ್ಯೆ ಹು.ಧಾ.ನ.ಪ್ರಾ. /ಸರ್ವೆ/2014-15 / 1 7 6 1 / ದಿನಾಂಕ: 21-08-2014 ರಂದು ಕಳುಹಿಸಿದೆ.
8	ರಾಯನಾಳ	88.2ನೇ ಹಂತ	24.00	
9	ಸತ್ತೂರ ತಡಸಿನಕೊಪ್ಪ		227.21	ಕ.ಜ.ಪ. ಟೆಂಡರ ಕರೆದು ವರ್ಕ ಆರ್ಡರ್ ಕೊಡಲಾಗಿದ್ದು, ಕೆಲಸ ಪ್ರಗತಿಯಲ್ಲಿದೆ.
10	ಲಕಮನಹಳ್ಳಿ	165 ಅ+166	181.00	
11	ಅಯೋದ್ಯಾ	156	20.17	ದಿ: 20/05/2013 ರಂದು ತಹಶೀಲ್ದಾರ ಕಚೇರಿ ಹುಬ್ಬಳ್ಳಿ ಇವರಿಗೆ ಅನುಮೋದನೆಗಾಗಿ ಕಳುಹಿಸಿದೆ.
12	ಅಯೋದ್ಯಾ	157	17.19	

ಒಟ್ಟು 12 ವಿನ್ಯಾಸಗಳ ಕ.ಜ.ಪ. ಅಂತಿಮ ಹಂತದಲ್ಲಿರುತ್ತದೆ. ಈ ಕುರಿತು ಅನುಮೋದನೆಗಾಗಿ ಸಂಬಂಧಿಸಿದವರಿಗೆ ಜ್ಞಾಪನೆ ಬರೆದು ಕೂಡಲೇ ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.

18) ಪ್ರಾಧಿಕಾರದ ವಿನ್ಯಾಸಗಳನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಕುರಿತು :-

ಪ್ರಾಧಿಕಾರದ ಈ ಕೆಳಕಂಡ ವಿನ್ಯಾಸಗಳನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುವುದಿಲ್ಲ.

ಅ.ನಂ	ವಿನ್ಯಾಸದ ಹೆಸರು
01	ತಡಸಿನಕೊಪ್ಪ -2ನೇ ಹಂತ
02	ಭೈರಿದೇವರಕೊಪ್ಪ
03	ಲಕಮನಹಳ್ಳಿ ಸ.ನಂ-15/2

ಸರ್ಕಾರದ ಆದೇಶ ಸಂಖ್ಯೆ: ನ.ಆ.ಇ : 225 : ಬೆ.ಮ.ಪ್ರಾ : 2010 : ದಿನಾಂಕ:29-12-2010 ರ ಆದೇಶದಂತೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಸೂಕ್ತ ಕ್ರಮಕೈಕೊಳ್ಳಲು ಸೂಚಿಸಿದೆ.

19) ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಕುರಿತು :-

2018-19 ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಾಗರೀಕ ಸೌಲಭ್ಯ ನಿವೇಶನಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 216 ಬೆಂಗಳೂರು ದಿನಾಂಕ:24.05.2017 ರ ನಿಯಮಗಳನ್ನು ಪಾಲಿಸದೇ ಹಂಚಿಕೆ ಮಾಡಿರುವುದು. ಮಾಡಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಒದಗಿಸಲಾದ 12 ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಲೆಕ್ಕಪತ್ರ ಕಡತಗಳ ಪರಿಶೀಲಿಸಲಾಗಿ

1. ಅರ್ಜಿದಾರರಿಂದ ನೋಂದಣಿ ಶುಲ್ಕ ಭರಣಾ ಮಾಡಿಕೊಂಡಿರುವ ಸೂಕ್ತ ದಾಖಲಾತಿಗಳನ್ನು ನಿಯಮ 8 ರ ಪ್ರಕಾರ ಮಾಡಿಕೊಂಡಿರುವುದಿಲ್ಲ ಮತ್ತು ನೋಂದಣಿ ಶುಲ್ಕ ಕಡಿಮೆ ಭರಣಾ ಮಾಡಿಕೊಂಡಿರುತ್ತಾರೆ.
2. ಫಾರಂ-2 ದಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಮಾಡಿದ ಪ್ರತಿ ಅರ್ಜಿ ನಮೂನೆಗಳಿರುವುದಿಲ್ಲಾ
3. ಫಾರ್ಮ-3 ರಂತೆ ಲೀಸ್ ಅಗ್ರಿಮೆಂಟ್ ಮಾಡಿಕೊಂಡಿರುವುದಿಲ್ಲ.

4. ನಿಯಮ 16 ರ ಪ್ರಕಾರ ಫಾರ್ಮ-4 ನಮೂನೆ ಪ್ರಕಾರ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಾಗರೀಕ ಸೌಲಭ್ಯ ನಿವೇಶನಗಳ ಮಾಹಿತಿ ಪುಸ್ತಕವನ್ನು ನಿರ್ವಹಿಸಿರುವುದಿಲ್ಲಾ.

5. ನಿಯಮ 13 ರ ಪ್ರಕಾರ ನಾಗರೀಕ ಸೌಲಭ್ಯ ನಿವೇಶನ ಗುತ್ತಿಗೆ ಮೊತ್ತವನ್ನು ಪ್ರಾಧಿಕಾರದಿಂದ ನಿಗದಿಗೊಳಿಸುವಾಗ ಪ್ರತಿ ಚ.ಮೀಗೆ ನಾಗರೀಕ ಸೌಲಭ್ಯವಿರುವ ಬಡಾವಣೆಯ ವಸತಿ ನಿವೇಶನದ ಮಾರುಕಟ್ಟೆ ದರಕ್ಕಿಂತ ಕಡಿಮೆ ನಿಗದಿ ಮಾಡಬಾರದು.ಆದರೆ 2018-19 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಾಗರೀಕ ಸೌಲಭ್ಯ ನಿವೇಶನಗಳಿಗೆ ಪ್ರತಿ ಚ.ಮೀ ಗೆ ರೂ.1,000.00 ಗಳನ್ನು ನಿಗದಿ ಮಾಡಿ ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ.ಈ ಲೋಪವನ್ನು ಸರಿಪಡಿಸಿಕೊಂಡು ಮುಂಬರುವ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ವೇಳೆ ಪಾಲಿಸಿ ಆರ್ಥಿಕ ಸದೃಢತೆಯನ್ನು ಹೊಂದಲು ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಮೊದಲೇ ತಿಳಿಸಿದಂತೆ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಾಗರೀಕ ಸೌಲಭ್ಯ ನಿವೇಶನಗಳ ಅರ್ಜಿದಾರರಿಂದ ಕಡಿಮೆ ಭರಣಾ ಮಾಡಿದ ನೋಂದಣಿ ಶುಲ್ಕಗಳ ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ನಾಗರಿಕ ಸೌಲಭ್ಯ ಪ್ಲಾಟ್ ನಂ	ಭರಣಾ ಮಾಡಬೇಕಾದ ನೋಂದಣಿ ಶುಲ್ಕ	ಭರಣಾ ಮಾಡಿದ್ದು	ವ್ಯತ್ಯಾಸ
1	ಅಂ86/4	2000.00	1000.00	1000.00
2	ಅಂ 560+ಃ	2000.00	1000.00	1000.00
3	ಅಂ 4	2000.00	1000.00	1000.00
4	ಅಂ 334	8000.00	5000.00	3000.00
5	ಅಂ 337	8000.00	5000.00	3000.00
6	ಅಂ 5	4000.00	2000.00	2000.00
7	ಅಂ 7	15000.00	7000.00	8000.00
8	29/2ಂ	2000.00	1000.00	1000.00
9	(24/ಂ1) (ಂ100+101+102/ಕ	2000.00	1000.00	1000.00
			ಒಟ್ಟು	21,000.00

ನಾಗರೀಕ ಸೌಲಭ್ಯ ನಿವೇಶನಗಳ ಅರ್ಜಿದಾರರಿಂದ ನೋಂದಣಿ ಶುಲ್ಕ ರೂ.21,000/- ಗಳನ್ನು ಕಡಿಮೆ ಭರಣಾ ಮಾಡಿಕೊಂಡಿರುತ್ತಾರೆ. ಆದ ಕಾರಣ ರೂ.21,000/- ಗಳನ್ನು ನೋಂದಣಿ ಶುಲ್ಕವನ್ನು ವಸೂಲಿ ಮಾಡಿ ಸಂಬಂಧಿಸಿದ ಖಾತೆಗೆ ಜಮಾ ಮಾಡುವ ವರೆಗೂ ರೂ.21,000.00/- ವಸೂಲಾತಿಯಲ್ಲಿಡಲಾಗಿದೆ.

20) <u>ಜಿಲ್ಲಾಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,ಧಾರವಾಡ ಇವರಿಗೆ ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಕುರಿತು</u> :-

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ದಿನಾಂಕ **01.09.2018** ರಂದು ಜರಿಗಿದ ಮಾಸಿಕ ಸಭೆಯಲ್ಲಿ ಜಿಲ್ಲಾಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,ಧಾರವಾಡ ಇವರಿಗೆ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಮಾಡಿಕೊಳ್ಳಲು 30 ವರ್ಷಗಳ ಗುತ್ತಿಗೆ ಆಧರದ ಮೇಲೆ ಹಂಚಿಕೆ ಮಾಡಲು ನಿರ್ಧರಿಸಿ ಒಟ್ಟು 11 ನಿವೇಶನಗಳನ್ನು ಇಲಾಖೆಗೆ ನೀಡಿರುತ್ತಾರೆ.ಸದರಿ ನಾಗರೀಕ ಸೌಲಭ್ಯ ನಿವೇಶನಗಳ ಮೊತ್ತವನ್ನು ವಿಳಂಬವಾಗಿ ಭರಣ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ .ಸದರಿ ವಿಳಂಬದ ಬಡ್ಡಿ ಮೊತ್ತ ರೂ.5,16,120/- ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರ ಕೆಳಗಿನಂತಿದೆ.

ಕ್ರ. ಸಂ.	ತಾಲೂಕ/ಗ್ರಾಮ	ಹಿ.ಸ.ನಂ/ಸ.ಟಿ.ಎ ಸ.ನಂ	ಕ್ಷೇತ್ರ	ಪ್ರತಿ ಚ.ಮೀ ದರ	ಒಟ್ಟು ಮೊತ್ತ	ವಿಳಂಬದ ಅವಧಿ(ಕೆ.12 ರಂತೆ)	ವಿಳಂಬದ ಬಾಬ ಬಡ್ಡಿ ಹಣ ಭರಣ ಮಾಡಬೇಕಾದ ಮೊತ್ತ ರೂ.
1	ಧಾರವಾಡ ತಾಲೂಕ ಲಕಮನಹಳ್ಳಿ	157/ಅ/ಗ ಸ.ಎ.ನಿವೇಶನ ನಂ.86	263.99 ಚ.ಮೀ	1,000	2,63,990.00	110ದಿನಗಳು (ಹಂಚಿಕೆ ಮಾಡಿದ ದಿ:04.10.2018)	34,430.00
2	ಧಾರವಾಡ ತಾಲೂಕ ತಡಸಿನಕೊಪ್ಪ	55/8,55/2 ಸ.ಎ.ನಿವೇಶನ ನಂ.17	238.70 ಚ.ಮೀ	1,000	2,38,700.00	110ದಿನಗಳು (ಹಂಚಿಕೆ ಮಾಡಿದ ದಿ:04.10.2018)	18,590.00
3	ಹುಬ್ಬಳ್ಳಿ ತಾಲೂಕ ಬೈರಿದೇವರಕೊಪ್ಪ	305 ಸ.ಎ.ನಿವೇಶನ ನಂ.46	836.70 ಚ.ಮೀ	1,000	8,36,700.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	87,780.00
4	ಹುಬ್ಬಳ್ಳಿ ತಾಲೂಕ ಬಮ್ಮಾಪುರ	76 ಸ.ಎ.ನಿವೇಶನ ನಂ.346	537.45 ಚ.ಮೀ	1,000	5,37,450.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	14,630.00
5	ಹುಬ್ಬಳ್ಳಿ ತಾಲೂಕ ಅಮರಗೋಳ	250/2/1,254/1, 255/2,255/6,26 1/2,260/1.260/ 2.260/3,260/4 ಸ.ಎ.ನಿವೇಶನ ನಂ.196/1	603.85 ಚ.ಮೀ	1,000	6,03,850.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	54,670.00
6	ಹುಬ್ಬಳ್ಳಿ ತಾಲೂಕ ಅಮರಗೋಳ	ಸ.ಎ.ನಿವೇಶನ ನಂ:195	328.80 ಚ.ಮೀ	1,000	3,28,80.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	29,700.00
7	ಹುಬ್ಬಳ್ಳಿ ತಾಲೂಕ ಕೃಷ್ಣಾಪುರ	78/1ಅ+1ಬ+16+ 1ಡ ಸ.ಎ.ನಿವೇಶನ ನಂ.48	330.37 ಚ.ಮೀ	1,000	3,30,30.00	110ದಿನಗಳು (ಹಂಚಿಕೆ ಮಾಡಿದ ದಿ:27.09.20 18)	38,830.00
8	ಹುಬ್ಬಳ್ಳಿ ತಾಲೂಕ ಗೋಕುಲಕೊಪ್ಪ	3/1+2ಅ+2ಬ+2 ಕ+2ಡ ಸ.ಎ.ನಿವೇಶನ ನಂ.141	537.46 ಚ.ಮೀ	1,000	5,37,460.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	47,190.00
9	ಧಾರವಾಡ ತಾಲೂಕ ಕಲಘಟಗಿ	86,87/2 ಸ.ಎ.ನಿವೇಶನ ನಂ.90	784.06 ಚ.ಮೀ	1,000	7,84,060.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	72,380.00
10	ಧಾರವಾಡ ತಾಲೂಕ ಹಿರೇಮಲ್ಲಿಗವಾಡ	50/ಗ ಸ.ಎ.ನಿವೇಶನ ನಂ.257	885.00 ಚ.ಮೀ	1,000	8,85,000.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	80,190.00
11	ಧಾರವಾಡ ತಾಲೂಕ ಕಲಘಟಗಿ	382/ಬ ಸ.ಎ.ನಿವೇಶನ ನಂ.27	578.53 ಚ.ಮೀ	1,000	5,78,530.00	110ದಿನಗಳು (ಹಂಚಿಕೆ ಮಾಡಿದ ದಿ:27.09.2018)	37,730.00
	*		*		59,24,910.00		5,16,120.00

21) ಸ.ಎ. ನಿವೇಶನ ಹಂಚಿಕೆ ಕುರಿತು :-

2018-19 ನೇ ಸಾಲಿನ ಸ.ಎ ನಿವೇಶನಗಳ ಹಂಚಿಕೆ ಕಡತಗಳನ್ನು ಪರಿಶೀಲಿಸಲಾಗಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 199. ರ ಅಡಿಯಲ್ಲಿ ಮಂಜೂರಾದ ನಿವೇಶನದ ಬೆಲೆ 90 ದಿವಸದೊಳಗಾಗಿ ಪಾವತಿ ಮಾಡಲು ನಿಯಮವಿದ್ದು, ಸದರಿ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬಂದಿರುತ್ತದೆ. ಹಾಗೂ 90 ದಿವಸ ಮೀರಿದ ಸಂಸ್ಥೆಗಳ ನಿವೇಶನಗಳ ರದ್ದುಪಡಿಸಲು ಸೂಚಿಸಿದೆ.

22) ಭೂಸ್ವಾಧೀನ ವೆಚ್ಚದ ವಿವರ:

